ಕ್ರಮವನ್ನು ಹಾಗೂ ಸರ್ಕಾರ ಮಾಡಬೇಕಾದುದು ಏನಿದೆ, ಅಪೆಕ್ಸ್ ಬ್ಯಾಂಕ್ ಮಾಡಬೇಕಾದುದು ಏನಿದೆ, ನಬಾರ್ಡ್ ಮಾಡಬೇಕಾದುದು ಏನಿದೆ, Reserve Bank ಮಾಡಬೇಕಾದುದು ಏನಿದೆ ಎಂಬುದನ್ನೂ ಚರ್ಚಿಸೋಣ. Reserve Bank representative ಅನ್ನು ಕರೆಯೋಣ, NABAR Representative ಅನ್ನು ಕರೆಯೋಣ, Apex Bank ನವರನ್ನೂ ಕರೆಯೋಣ. ಇವರೆಲ್ಲರನ್ನೂ ಕರೆದು, ಚರ್ಚೆ ಮಾಡಿ, ಅವರ ನೇತೃತ್ವದಲ್ಲಿ ಏನು ನಿರ್ದೇಶನ ಕೊಡುತ್ತಾರೋ, ಆ ನಿರ್ದೇಶನದಂತೆ ಈ ಪುನಶ್ಚೇತನ ಕೆಲಸವನ್ನು ಕೈಗೊಳ್ಳುತ್ತೇವೆ. ಇನ್ನು 8–10 ದಿವಸಗಳಲ್ಲಿ ಅವರ ಅನುಕೂಲತೆಯನ್ನು ನೋಡಿಕೊಂಡು, ಈ ಸಭೆಯನ್ನು ನಾವು ಗೊತ್ತುಪಡಿಸುತ್ತೇವೆ ಅನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಉಪಾಧ್ಯಕ್ಷರು:**– ಮಾನ್ಯ ಆಂಜನೇಯವರೆ, ಎರಡೇ ನಿಮಿಷಗಳಲ್ಲಿ ತಮ್ಮ ವಿಷಯ ಪ್ರಸ್ತಾಪಿಸಿ.

**ಶ್ರೀ ಎಸ್.ಎಸ್. ಪಾಟೀಲ್:**– ಸನ್ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ಮಾತು ಹೇಳಬಯಸುತ್ತೇನೆ. ದಯವಿಟ್ಟು ಇದು ಬಹಳ ಮಹತ್ವದ್ದು ಇಲ್ಲಿ Special Officer ನವರು ಬರೆದಿರುವುದನ್ನು ಹೇಳುತ್ತೇನೆ, ದಯವಿಟ್ಟು ಕೇಳಿ. ಇನ್ನು 2–3 ತಿಂಗಳುಗಳಲ್ಲಿ ಬ್ಯಾಂಕೇ ಬಂದ್ ಆಗಿ ಹೋಗುತ್ತದೆ. ನಮಗೇನೂ ದುಡ್ಡೇ ಇಲ್ಲ, ನೌಕರರುಗಳಿಗೆ ಪಗಾರ ಕೊಡಲಿಕ್ಕೆ ದುಡ್ಡು ಇಲ್ಲವೆಂದು ಅವರು ಬರೆದಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್:**– ಇನ್ನು 8–10 ದಿವಸಗಳಲ್ಲಿ ಆ ಸಭೆಯನ್ನು ಮಾಡಿಸುತ್ತೇನೆ.

**ಶ್ರೀ ಎಸ್. ಎಸ್. ಪಾಟೀಲ್:**– ಸಭೆಯನ್ನೂ ಮಾಡಿಸಿರಿ, ಅದರ ಜೊತೆಗೆ ದುಡ್ಡೂ ರಿಲೀಸ್ ಮಾಡಿಸಿ...

**ಉಪಾಧ್ಯಕ್ಷರು:**– ಆಂಜನೇಯರವರೆ, ತಾವು ಮಾತನಾಡಿ. ಎರಡೇ ನಿಮಿಷಗಳಲ್ಲಿ ಮುಗಿಸಿ.

**ವಿಷಯ:** ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಆಟೋರಿಕ್ಷಾ ವಿತರಣೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಸಿ.ಓ.ಡಿ. ತನಿಖೆಗೆ ವಹಿಸಿರುವುದನ್ನು ರದ್ದುಪಡಿಸುವ ಬಗ್ಗೆ.

**ಶ್ರೀ ಹೆಚ್. ಆಂಜನೇಯ (ಭರಮಸಾಗರ):**– ಮಾನ್ಯ ಉಪಾಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಮಾಜ ಕಲ್ಯಾಣ ಸಚಿವರಾಗಿರತಕ್ಕಂಥ

ಶ್ರೀಮಾನ್ ಡಾ. ವೈ. ನಾಗಪ್ಪನವರ ಗಮನ ಸೆಳೆಯ ಬಯಸುತ್ತಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಆಟೋರಿಕ್ಷಾ ವಿತರಣೆಯಲ್ಲಿ ಅವ್ಯವಹಾರ ನಡೆದಿದೆ ಎಂದು ನಮ್ಮ ಗೌರವಯುತ ಸದಸ್ಯರಾದ ಶ್ರೀ ಅಶೋಕ್ ರವರು ಇಲ್ಲಿ ಪ್ರಶ್ನೆಯೊಂದನ್ನು ಹಾಕಿದ್ದರು. ಆ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರು, ಅದನ್ನು ಸಿ.ಓ.ಡಿ. ತನಿಖೆಗೆ ವಹಿಸುತ್ತೇನೆ ಎಂದು ಸದನದಲ್ಲಿ ಹೇಳಿದ್ದಾರೆ. ಅದು ಸಿ.ಓ.ಡಿ. ತನಿಖೆ ಮಾಡುವಷ್ಟು ದೊಡ್ಡ ಹಗರಣವಲ್ಲ. ಅಲ್ಲಿ ಆಟೋರಿಕ್ಷಾ ವಿತರಣೆಯಲ್ಲಿ ಬೋಗಸ್ ಸರ್ಟಿಫಿಕೇಟ್, ಅಂದರೆ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಕೊಟ್ಟು, ಆಟೋರಿಕ್ಷಾಗಳನ್ನು ಪಡೆದಿದ್ದಾರೆ. ಆ ಒಂದು ಬೋಗಸ್ ಸರ್ಟಿಫಿಕೇಟ್ ಬಗ್ಗೆ ತನಿಖೆ ಮಾಡಲಿಕ್ಕೆ ನಮ್ಮದೇ ಆದಂತಹ CRE Cell ಎಂಬುದು ಇದೆ. ಅ ಸೆಲ್ ಗೆ ಈ ವಿಷಯವನ್ನು refer ಮಾಡಿ. ಅಲ್ಲಿ ತನಿಖೆ ಮಾಡುತ್ತಾರೆ. ಯಾರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಟ್ಟಿರುತ್ತಾರೋ, ಅಂತಹವರನ್ನು ಶಿಕ್ಷೆ ಮಾಡುವ ಸಲುವಾಗಿಯೇ ಆ ಸೆಲ್ ಇದೆ. ಸಿ.ಓ.ಡಿ. ತನಿಖೆಗೆ ಒಳಪಡತಕ್ಕಂಥ ಒಂದು ಪ್ರಕರಣ ಇದಲ್ಲ ಎಂದು ನಾನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುತ್ತೇನೆ. ನಾಳೆ ನೀವೇನಾದರೂ ಈ ರೀತಿ ಸಿ.ಓ.ಡಿ. ತನಿಖೆಗೆ ಹೋದಿರಿ ಎಂದರೆ ಕಷ್ಟವಾಗುತ್ತದೆ. ಈಗಾಗಲೇ ಇಲ್ಲಿ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು 10 ಸಾವಿರ ರೂಪಾಯಿಗಳ ಸಾಲಕ್ಕಾಗಿ ಬ್ಯಾಂಕಿಗೆಲ್ಲಾ ಅಲೆದಾಡುತ್ತಿದ್ದಾರೆ. ನೀವೇನಾದರೂ ಇದನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಿದರೆ, ಬ್ಯಾಂಕ್‌ನವರು 'ಹೋಗ್ರಿ, ನಿಮ್ಮ ಪ್ರಕರಣಗಳೆಲ್ಲಾ ಸಿ.ಓ.ಡಿ. ತನಿಖೆಯಲ್ಲಿದೆ, ನಾವೇನೂ ಕೊಡುವುದಕ್ಕಾಗುವುದಿಲ್ಲ' ಎಂದು ಹೇಳುತ್ತಾರೆ. ಅದನ್ನೇ ಒಂದು ಕಾರಣವನ್ನಾಗಿ ಮುಂದೊಡ್ಡಿ ಆ ಫಲಾನುಭವಿಗಳಿಗೆ ಸಿಗಬೇಕಾದಂತಹ ಸವಲತ್ತಿನಿಂದ ವಂಚಿತರನ್ನಾಗಿ ಮಾಡತಕ್ಕಂಥ ಹಿನ್ನೆಲೆ ಇರುವುದರಿಂದ, ತಾವು ದಯಮಾಡಿ ತನಿಖೆ ಮಾಡಿ. ತನಿಖೆ ಮಾಡುವುದನ್ನು ಬೇಡ ಎನ್ನುವುದಿಲ್ಲ. ಯಾರು ತಪ್ಪಿತಸ್ಥರು ಇರುತ್ತಾರೋ ಅವರಿಗೆ ಶಿಕ್ಷೆ ಕೊಡಿ. ಆದರೆ ಈಗ ಸಿ.ಓ.ಡಿ. ತನಿಖೆಗೆ ನೀವೇನು ಆಜ್ಞೆ ಮಾಡಿದ್ದೀರೋ, ಅದನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಿ. ನಿಮ್ಮ ಇಲಾಖಾ ಮಟ್ಟದಲ್ಲಿ ಉನ್ನತಾಧಿಕಾರಿಯಿಂದ ತನಿಖೆಗೆ ಆದೇಶ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ departmental enquiry ಮಾಡಿ. ಏಕ್‌ದಂ ನೀವು.....ನಾವೇನಾದರೂ ಸಿ.ಓ.ಡಿ.ಗೆ

ರೆಫರ್ ಮಾಡಿ ಅಥವಾ ಸಿ.ಬಿ.ಐ.ಗೆ ರೆಫರ್ ಮಾಡಿ ಎಂದರೆ ನೀವು ಇಲ್ಲವೆಂದು ಹೇಳುತ್ತೀರಿ. ಏನೋ ಅಕಸ್ಮಾತ್ ಪ್ರಸ್ತಾಪವಾಗಿದ್ದನ್ನು, ಏಕ್ ದಂ ಸಿ.ಓ.ಡಿ.ಗೆ ರೆಫರ್ ಮಾಡಿ ಬಿಟ್ಟಿದ್ದೀರಿ. ಇದರಿಂದಾಗಿ ಆ ಇಲಾಖೆ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇದರ ಬಗ್ಗೆ departmental enquiry ಮಾಡಿ, ಅದರಲ್ಲೇನಾದರೂ ಸ್ವಲ್ಪ prima-facie ಬಂದರೆ ತಾವು ಹೇಗಾದರೂ ಮುಂದುವರೆಸಿ. ತಕ್ಷಣಕ್ಕೆ ಅದನ್ನು ನಿಲ್ಲಿಸಿ ಬಿಟ್ಟು, ಏನಾದರೂ departmental enquiry ಮಾಡಲಿಕ್ಕೆ ತಾವು ಆದೇಶ ಮಾಡಬೇಕು.

**ಡಾ. ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು)**:– ಮಾನ್ಯ ಉಪಾಧ್ಯಕ್ಷರೆ, ಈ ಪ್ರಕರಣದಲ್ಲಿ ನಾನು ಸಿ.ಓ.ಡಿ. ಮಾಡಿಸುವ ಉದ್ದೇಶ ಇಟ್ಟುಕೊಂಡಿರಲಿಲ್ಲ. ನಮ್ಮ ಇಲಾಖೆಯಲ್ಲೇ ಸಮರ್ಥರಾದ ಅಧಿಕಾರಿಗಳಿದ್ದಾರೆ. ಅವರಿಂದ ತನಿಖೆ ಮಾಡಿಸುತ್ತೇನೆ ಎಂದು ಹೇಳಿದಾಗ, ವಿರೋಧ ಪಕ್ಷಗಳಲ್ಲಿ ಇರತಕ್ಕಂಥ ಸದಸ್ಯರು ಒಕ್ಕೊರಲಿನಿಂದ, ಇದರ ಬಗ್ಗೆ ಸಿ.ಓ.ಡಿ. ತನಿಖೆ ಆಗಲೇಬೇಕು ಎಂದು ಹೇಳಿದರು. ಅವರ ಮಾತುಗಳಿಗೆ ನಾನು ಬೆಲೆ ಕೊಟ್ಟು ಇದರ ಬಗ್ಗೆ ಸಿ.ಓ.ಡಿ. ತನಿಖೆಗೆ ಒಪ್ಪಿಕೊಂಡಿದ್ದೆನು. ಅನೇಕ ಸದಸ್ಯರು ಇವತ್ತು ಸಿ.ಓ.ಡಿ. ತನಿಖೆ ಬೇಡ, ಬೇರೆ ತನಿಖೆ ಬೇಡ ಮಾಡಿ ಇಂದು ಹೇಳಿರುವಾಗ, ಅದರ ಬಗ್ಗೆ ನಾನು ಮರು ಪರಿಶೀಲನೆ ಮಾಡುತ್ತೇನೆಂದು ಈ ಸದನಕ್ಕೆ ಭರವಸೆ ಕೊಡುತ್ತೇನೆ.

**ಶ್ರೀ ಕೆ. ವಿಶ್ವೇಶ್ವರ ಹೆಗಡೆ:** ಮಾನ್ಯ ಉಪಾಧ್ಯಕ್ಷರೆ, ಒಬ್ಬರು ಸದಸ್ಯರು ಹೇಳಿದ ತಕ್ಷಣ ಒಂದು ನಮೂನೆ, ಇನ್ನೊಬ್ಬರು ಸದಸ್ಯರು ಹೇಳಿದ ತಕ್ಷಣ ಮತ್ತೊಂದು ನಮೂನೆಯೇ? ಸರ್ಕಾರದ ನಿಲುವೇನು? ಎಂದು ಅರ್ಥವಾಗುವುದಿಲ್ಲ. ಇಲಾಖೆಯ ಉನ್ನತಾಧಿಕಾರಿಗಳು ಯಾರಿದ್ದಾರೋ, ಬೇರೆ ಸೆಲ್ ಏನಿದೆಯೋ, ಅದರೊಳಗೆ ಏನೇನು verify ಆಗಬೇಕೋ, ಆದೆಲ್ಲಾ ಆಗಲಿ. ಆದರೆ ಈ ಸದನದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಮಾನ್ಯ ಸಚಿವರು ಸಿ.ಓ.ಡಿ. ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ. ಉಳಿದಂತಹ ಯಾವ್ಯಾವ ತನಿಖೆಗಳು ಆಗಬೇಕೋ ಅದು ಆಗಲಿ. ಆದರೆ ಸಿ.ಓ.ಡಿ. ತನಿಖೆಯಿಂದ ಹಿಂದೆ ಹೋದರೆ, ಆ ಹಗರಣಕ್ಕೆ ಮತ್ತಷ್ಟು ಬೆಲೆ ಸಿಗುತ್ತದೆ. ಆ ಹಗರಣದ ಒತ್ತಡದಿಂದಲೇ ನೀವು ಸಿ.ಓ.ಡಿ.ಯಿಂದ ಹಿಂದೆ ಹೋಗುತ್ತಿದ್ದೀರಿ ಎನ್ನುವಂತಹ ಭಾವನೆಗಳು ಬರುತ್ತವೆ. ಮಾನ್ಯ ಉಪಾಧ್ಯಕ್ಷರೆ, ಇದು ಸರಿಯಲ್ಲ ಈ ಸದನದ ಘನತೆ–ಗೌರವಕ್ಕೆ ಇದು ಧಕ್ಕೆ ತರುವಂತಾದ್ದು, ಹಾಗಾಗಿ ಸಿ.ಓ.ಡಿ. ತನಿಖೆಯಿಂದ ಸರ್ಕಾರ ಹಿಂದೆ ಹೋಗುವುದು ಸರಿಯಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:–** ಈಗಾಗಲೇ ಸಿ.ಓ.ಡಿ. ತನಿಖೆಗೆ ಹೇಳಿದ್ದೀರಿ. ಸಿ.ಓ.ಡಿ. ತನಿಖೆಯಾದ ತಕ್ಷಣ ಏನೂ ನೇಣು ಹಾಕುವುದಿಲ್ಲವಲ್ಲ ಎಷ್ಟು ಸಿ.ಓ.ಡಿ ತನಿಖೆಗಳಾಗಿವೆ? ನೀವು ಆಜ್ಞೆ ಮಾಡಿದ್ದೀರಿ. ವರದಿ ತರಿಸಿಕೊಳ್ಳಿ. ಸಿ.ಓ.ಡಿ. ರಿಪೋರ್ಟ್ ಬರಲಿ, ಆಮೇಲೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಬರುತ್ತದೆ. ಈ ಆಜ್ಞೆ ಆಗಿರುವುದನ್ನು ಏಕೆ ವಾಪಾಸ್ ತೆಗೆದುಕೊಳ್ಳಲಿಕ್ಕೆ ಹೋಗುತ್ತೀರಿ? ಅದು ಬೇಡ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಯಾವ ಆಜ್ಞೆಯೂ ಕೂಡ ಇಲ್ಲಿ ಆಗಿಲ್ಲ.

**(ಗೊಂದಲ)**

ದಯಮಾಡಿ ಇಲ್ಲಿ ಇಲಾಖೆಯ ಕೆಲಸಗಳನ್ನೆಲ್ಲಾ stand still ಗೆ ತರುವ ಅಗತ್ಯ ಇಲ್ಲ. ಈಗಾಗಲೇ ಆ ಇಲಾಖೆಯಲ್ಲಿ ಕೆಲಸಗಳಾಗಿಲ್ಲ ಎಂದು ನಾವು ಬೊಬ್ಬೆ ಹೊಡೆಯುತ್ತಿದ್ದೇವೆ. ತಾವು ಇಲಾಖಾ ತನಿಖೆ ಮಾಡಿ. ನಾವೇನು ತನಿಖೆ ಮಾಡಿಸಬೇಡಿ ಎಂದು ಹೇಳಿಲ್ಲ Prima-facie ನಿಮಗೆ charge Prove ಆದರೆ ನೀವು ಸಿ.ಓ.ಡಿ. ತನಿಖೆ ಮಾಡಿಸಿ. ನಾವು ಯಾರನ್ನೂ shield ಮಾಡುತ್ತಿಲ್ಲ. ನೀವು ಒಂದೇ ಒಂದು ಸಲ 'ಸಿ.ಓ.ಡಿ.' ಎಂದ ತಕ್ಷಣ, ಎಲ್ಲಾ ರೆಕಾರ್ಡ್‌ಗಳನ್ನು seize ಮಾಡಿ ಬಿಟ್ಟು ಕೆಲಸ ಮಾಡುವ ಸ್ಥಿತಿಯನ್ನು stand still ಮಾಡಿ ಬಿಟ್ಟರೆ ಗತಿಯೇನು? ದಯಮಾಡಿ ಇದನ್ನು department enquiry ಗೇ confine ಮಾಡಬೇಕು ಎಂದು ನಾವು demand ಮಾಡುತ್ತೇವೆ.

**ಶ್ರೀ ಅರಗ ಜ್ಞಾನೇಂದ್ರ :–** ಮಾನ್ಯ ಉಪಾಧ್ಯಕ್ಷರೆ, ಅವತ್ತು ಇದೊಂದು ಭಾರಿ ದೊಡ್ಡ ಹಗರಣ. ಇದರ ಬಗ್ಗೆ ತನಿಖೆ ಮಾಡಬೇಕೆಂದು ಒಕ್ಕೊರಲಿನ ಒತ್ತಾಯ ಎಲ್ಲಾ ಕಡೆಯಿಂದ ಬಂತು. ಸಿ.ಓ.ಡಿ.ಗೆ ಇದನ್ನು ಒಪ್ಪಿಸುತ್ತೇನೆ ಎಂದು ಮಾನ್ಯ ಸಚಿವರೇ ಇಲ್ಲಿ ಹೇಳಿದ್ದಾರೆ. ಸಿ.ಓ.ಡಿ. ತನಿಖೆಗೆ ಹಾಕಿದ ತಕ್ಷಣವೇ ಯಾರಿಗೋ ಶಿಕ್ಷೆ ಆಗುತ್ತದೆ ಎನ್ನುವಂತಾದ್ದು ಇಲ್ಲ. ಸಿ.ಓ.ಡಿ. ಕೂಡ ಏನು ಮಾಡುತ್ತಾರೆ ಎಂಬುದು ಎಲ್ಲರಿಗೂ ಕೂಡ ಗೊತ್ತಿರುವಂತದ್ದೇ. ಆದರೆ ಇವತ್ತು ಆ ಇಲಾಖೆಯಲ್ಲಿ ಎಲ್ಲವೂ ಕೂಡ ನೆಟ್ಟಗಿಲ್ಲ. ಇವತ್ತು ಪಂಪ್ ಸೆಟ್ಟುಗಳನ್ನು ತಂದು ಕೊಟ್ಟಿದ್ದಾರೆ, ಆರು ತಿಂಗಳಿನಿಂದ ಪೈಪ್ ಸರಬರಾಜು ಮಾಡಲಿಲ್ಲ. ಆ ದುಡ್ಡು ಏನಾಯಿತು? ಎಂದು ಇಲ್ಲಿ ಯಾರಿಗೂ ಕೂಡ ಗೊತ್ತಿಲ್ಲ. ಆದ್ದರಿಂದಾಗಿ, ಮೊದಲೇ ಹಾಳಾಗಿ ಹೋಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಕ್ಕೆ ನ್ಯಾಯ ದೊರಕಿಸುವಂತಹ ದೃಷ್ಟಿಯಿಂದ, ಆ ಇಲಾಖೆಯನ್ನು ಸ್ವಲ್ಪ ಚುರುಕುಗೊಳಿಸಬೇಕೆಂಬ ದೃಷ್ಟಿಯಿಂದ, ಆ ಇಲಾಖೆಯಲ್ಲಿರುವವರಿಗೆ

ಭಯ–ಭೀತಿ ಇರುವಂತಹ ದೃಷ್ಟಿಯಿಂದ, ಇದು ಅಗತ್ಯ ಎಂಬುದು ನಮ್ಮೆಲ್ಲರ ಅಭಿಪ್ರಾಯವಾಗಿತ್ತು ಆದ್ದರಿಂದ, ಮತ್ತೆ ಹಿಂದಕ್ಕೆ ಹೋದರೆ, ಇದರ ಅರ್ಥವೇನು? ನನಗೇಕೋ ಇದು ವಿಚಿತ್ರ ಎಂದು ಕಾಣುತ್ತದೆ. ಯಾರಾದರೂ ಎನ್‌ಕ್ವೈರಿ ಮಾಡಲಿ. ಎನ್‌ಕ್ವೇರಿ ಮಾಡುವುದು ಶಿಕ್ಷೆಯೇನೂ ಅಲ್ಲವಲ್ಲ. ಆದ್ದರಿಂದಾಗಿ ಎನ್‌ಕ್ವೈರಿ ಮುಂದುವರೆಯಲಿ. ಆದಷ್ಟು ಬೇಗನೆ ರಿಪೋರ್ಟ್ ಕೊಡಿ ಎಂದು ಹೇಳಿ, ಇಲ್ಲವೆಂದರೆ ಇಲ್ಲವೆಂದು ತನಿಖೆಯಿಂದ ಹೊರಬರಲಿ. ಸಿ.ಓ.ಡಿ. ಕೊಟ್ಟ ತಕ್ಷಣವೇ ಯಾರನ್ನಾದರೂ suspend ಮಾಡುತ್ತಾರೆ ಅಥವಾ ನೇಣು ಹಾಕುತ್ತಾರೆ ಎನ್ನುವಂತಾದ್ದು ಏನಿಲ್ಲ. ಸಾವಿರಾರು ಸಿ.ಓ.ಡಿ.ಗೆ ವಹಿಸಿದ್ದೇವೆ. ಏನು ಆಗಿದೆ? ಹಾಗಾಗಿ ಯಾರೂ ಭಯ ಪಡುವಂತಹ ಅವಶ್ಯಕತೆ ಇಲ್ಲ. ಆದರೆ ದುರ್ಬಲ ವರ್ಗದವರಿಗೆ, ದಲಿತರಿಗೆ ಇದರಿಂದ ನ್ಯಾಯ ದೊರಕಿಸಬೇಕು ಅನ್ನುವಂತಾದ್ದೇ ಎಲ್ಲರ ಅಪೇಕ್ಷೆ. ಆ ನ್ಯಾಯ ದೊರಕುತ್ತದೆ ಎನ್ನುವುದಾದರೆ ಈ ತನಿಖೆ ನಡೆಯಲಿ. ನಿಜವಾಗಿಯೂ ಅನ್ಯಾಯ ಆಗಿದ್ದರೆ, ಅವರಿಗೆ ಶಿಕ್ಷೆ ಆಗಲೇಬೇಕು. ಅದರಲ್ಲಿ ಹಿಂದೆ ಸರಿಯುವಂತಹ ಪ್ರಶ್ನೆಯೇ ಇಲ್ಲ. ಅದು ಎಷ್ಟೇ ದೊಡ್ಡವರದಾಗಿರಲಿ. ಆದರೆ ಅಮಾಯಕರಿಗೆ ಶಿಕ್ಷೆ ಆಗಬಾರದು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಅದೇ point ಇಲ್ಲಿರುವುದು. ಅಮಾಯಕರೋ ಅಲ್ಲವೋ ಎಂಬುದು ತೀರ್ಮಾನವಾಗಬೇಕು. Departmental enquiry ಮಾಡಿ.ಇಂತಾದ್ದೇ ತನಿಖೆ ಮಾಡಿ, ಅಂತಾದ್ದೇ ತನಿಖೆ ಮಾಡಿ ಎಂದಲ್ಲ. ತನಿಖೆ ಮಾಡಿ. ನಾವ್ಯಾರೂ ತನಿಖೆಗೆ ವಿರುದ್ಧವಾಗಿಲ್ಲ. ತನಿಖೆಯೇ ಆಗುವುದು ಬೇಡವೆಂದು ನಾವ್ಯಾರೂ ಹೇಳುತ್ತಿಲ್ಲ. ನೀವು ತನಿಖೆ ಮಾಡಿ. ಸಿ.ಓ.ಡಿ.ಯೇ ಆಗಬೇಕು, ಲೋಕಾಯುಕ್ತವೇ ಆಗಬೇಕು ಎಂದು ದಯಮಾಡಿ ಆ ಇಲಾಖೆ ಕೆಲಸ ಮಾಡದೆ ಇರುವಂತಹ stage ನಿರ್ಮಾಣ ಮಾಡಬೇಡಿ.

**ಶ್ರೀ ಎಸ್. ರಾಜೇಂದ್ರನ್ :–** ಮಾನ್ಯ ಉಪಾಧ್ಯಕ್ಷರೆ, 40 ಲಕ್ಷ ರೂಪಾಯಿಗಳನ್ನು CRE Cell ಗಾಗಿ ಖರ್ಚು ಮಾಡಲಾಗುತ್ತಿದೆ.ಅವರ ಕೆಲಸ ಏನು? ಫಸ್ಟ್ ಅವರು ಎನ್‌ಕ್ವೈರಿ ಮಾಡಲಿ, ತಪ್ಪಿದ್ದರೆ ನಿಮ್ಮ ನೋಟೀಸ್ ಗೆ ತೆಗೆದುಕೊಂಡು ಬರಲಿ. On that basis you give it to COD. 40 ಲಕ್ಷ ರೂಪಾಯಿಗಳ ಸಂಬಳ ಕೊಡುವುದು, ಅವರು ಮನೆಯಲ್ಲಿ ಕುಳಿತುಕೊಳ್ಳಲಿಕ್ಕಲ್ಲ. ಅವರಿಗೂ ಅವರ ಕೆಲಸವೇನು? ಎಂಬುದು ಗೊತ್ತಾಗಬೇಕು. Let them conduct an enquiry through CRE Cell.If you find false, give to COD and punish them.

**ಡಾ. ವೈ. ನಾಗಪ್ಪ:-** ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ಇದನ್ನು ಸಿ.ಓ.ಡಿ. ಹಾಕಬೇಕೆಂದೇನೂ ನನ್ನ ಉದ್ದೇಶ ಇರಲಿಲ್ಲ. ಸಾಕಷ್ಟು ಸದಸ್ಯರು ಒಕ್ಕೊರಲಿನಿಂದ, ನಾನು ಇಲಾಖೆಯಿಂದ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದಾಗ್ಯೂ ಇಲ್ಲ ಇದು COD ತನಿಖೆಯಾಗಬೇಕೆಂದು ಅವರೆಲ್ಲಾ ಒತ್ತಾಯಿಸಿದಾಗ, ಅವರ ಒತ್ತಾಯಕ್ಕೆ ನಾನು ಮಣಿದು.....

**ಶ್ರೀ ಬಿ.ಎಸ್.ಯಡಿಯೂರಪ್ಪ :-** ಮಾನ್ಯ ಮಂತ್ರಿಗಳೇ, ಒಂದು ನಿಮಿಷ. ನಾನು ನಿಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಸರ್ಕಾರ ಯಾವ ಒತ್ತಡಕ್ಕೂ ಮಣಿಯಬೇಕಾಗಿಲ್ಲ. ಈ ಭಾಗದಲ್ಲಿ ಕುಳಿತು ಶಾಸಕರಾಗಿ ನಮ್ಮ ಗಮನಕ್ಕೆ ಬಂದಿದ್ದನ್ನು, ಸರ್ಕಾರದ ಗಮನಕ್ಕೆ ತಂದು, ಆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನರಿಗೆ ನ್ಯಾಯ ಸಿಗಬೇಕೆಂಬ ದೃಷ್ಟಿಯಿಂದ ಕೆಲ ವೊಂದು ಡಿಮ್ಯಾಂಡ್‌ಗಳನ್ನು ತಮ್ಮ ಮುಂದೆ ಇಟ್ಟಿವು. ನನಗೆ ನೆನಪಿದ್ದಂತೆ, ಕಳೆದ 25 ವರ್ಷಗಳ ಇತಿಹಾಸದಲ್ಲಿ ಒಂದು ಸಾರಿ ಈ ಮನೆಯಲ್ಲಿ ಚರ್ಚೆ ಆಗಿ, ಅದಕ್ಕೆ ಒಪ್ಪಿಗೆ ಕೊಟ್ಟ ಮೇಲೆ, ಅದರಿಂದ ಹಿಂದೆ ಸರಿದಂತಹ ಉದಾಹರಣೆ ಗಳಿಲ್ಲ. ನಾವೇನು ಹೇಳುತ್ತಿದ್ದೇವೆ ಎಂದರೆ, ಬಿಗಿ ಮಾಡಿ, ನಿಷ್ಪಕ್ಷವಾದಂತಹ ತನಿಖೆ COD ಯಿಂದ ಮಾಡಿಸಿ. ಇದರಿಂದ ಮತ್ತೆ ಈ ರೀತಿಯ ಅನ್ಯಾಯ ಗಳಾಗದಂತೆ ಸರಿ ಹೋಗುತ್ತದೆ. ಅವರು ಪ್ರಾಮಾಣಿಕರಾಗಿದ್ದರೆ, ಇಲ್ಲ, ಅವರು ಪ್ರಾಮಾಣಿಕರಾಗಿದ್ದಾರೆ ಎಂದು ವರದಿ ಕೊಡುತ್ತಾರೆ. ಆದ್ದರಿಂದ ದಯಮಾಡಿ, ಈ ಸದನದಲ್ಲಿ ನಿಮ್ಮ ಬಾಯಿಂದ ಒಬ್ಬ ಸಚಿವರಾಗಿ, ಯಾವುದೋ ಒತ್ತಡಕ್ಕೆ ಮಣಿದು COD ತನಿಖೆಗೆ ಒಪ್ಪಿದೆ ಎಂದು ಹೇಳುವಂತಾದ್ದು, ಅದು ಒಳ್ಳೆಯ ಪದ್ಧತಿ ಆಗಲಿಕ್ಕಿಲ್ಲ. ದಯಮಾಡಿ, ಈಗೇನು ತನಿಖೆ ಇದೆಯೋ, ಅದನ್ನು ಮುಂದುವರೆಸಿ, ಮುಂದೇನು ಆಗುತ್ತದೋ ಅದನ್ನು ನೋಡೋಣ. ಆದರೆ ಆ ಮಾತು ನಿಮ್ಮ ಬಾಯಿಂದ ಬರಬಾರದು. ಇಲ್ಲದಿದ್ದರೆ, ಸರ್ಕಾರವೇ ಹಾಗೆ ಹೇಳಿಕೆ ಕೊಟ್ಟರೆ ಏನಾಗುತ್ತದೆ? ಇಲ್ಲೇ ನೀವು ಭರವಸೆ ಕೊಟ್ಟಿದ್ದೀರಿ.

**ಶ್ರೀ ಹೆಚ್. ಆಂಜನೇಯ :-** ಮಾನ್ಯ ಉಪಾಧ್ಯಕ್ಷರೆ, ಈ ಸದನದ ಗಮನಕ್ಕೆ ಒಂದು ವಿಷಯ ತರುತ್ತೇನೆ. ಛಾಪಾ ಕಾಗದದ ಹಗರಣ ಆದಾಗ, ಸರ್ಕಾರ.....

**ಉಪಾಧ್ಯಕ್ಷರು :-** ಸದ್ಯಕ್ಕೆ ಅದು ಬೇಡ. ಆ ಸಬ್ಜೆಕ್ಟ್ ಬೇಕಾಗಿಲ್ಲ. ಈ ಸಬ್ಜೆಕ್ಟ್‌ಗೆ ಇದು ಸಂಬಂಧ ಇಲ್ಲ.

**ಶ್ರೀ ಹೆಚ್. ಆಂಜನೇಯ :** ಮೊದಲು ನಿಮ್ಮ ತನಿಖೆ ಮಾಡಿಸಿ, ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿಸಿ, ಸಿ. ಆರ್. ಇ ಸೆಲ್ ಇದೆ,

ಅವರೂ ಕೂಡ ಸಿಓಡಿಗಿಂತ ಹೆಚ್ಚಿನ ಅಧಿಕಾರ ಉಳ್ಳವರು. ಸಿಓಡಿ ಮಟ್ಟದಲ್ಲಿ ಅದು ತನಿಖೆ ಆಗುತ್ತದೆ. ಸುಳ್ಳು ಜಾತಿ ಪ್ರಮಾಣ ಪತ್ರದ ಪ್ರಕರಣದಲ್ಲಿ ಇದು ತನಿಖೆ ಆಗುತ್ತಿರುವುದು. ಸಿಆರ್‌ಇ ಸೆಲ್‌ಗೆ ನೀವು ರೆಫರ್ ಮಾಡಿ. ಅಲ್ಲಿಂದ ಬರಲಿ ಬಂದ ಮೇಲೆ ಅವರು ಸರಿ ಮಾಡಲಿಲ್ಲ ಎಂದರೆ ಸಿಒಡಿಗಾದರೂ ಕೊಡಿ, ಸಿಬಿಐಗಾದರೂ ಕೊಡಿ, ನಾವು ಬೇಡವೆಂದು ಹೇಳುವುದಿಲ್ಲ. ಅವತ್ತು ನಾವು ಇರಲಿಲ್ಲ. ನಮಗೆ ಗೊತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿ ನಿಗಮದಲ್ಲಿ ಏನೇನು ಕೆಲಸ ನಡೆಯುತ್ತಿದೆ ಏನೇನು ಇಲ್ಲವೆಂದು ಪರಿಶಿಷ್ಟ ಜಾತಿಯ ಶಾಸಕರು ನಾವು ಇದ್ದೇವೆ. ನೇರವಾಗಿ ನಮಗೆ ಸಂಪರ್ಕ ಇದೆ. ಯಾವ ಯಾವ ಫಲಾನುಭವಿಗಳಿಗೆ ಯಾವ ಯಾವ ರೀತಿ ಕೆಲಸ ಆಗುತ್ತಿದೆ ಎಂದು ನಮಗೆ ಗೊತ್ತಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಆ ತನಿಖೆ ಏನಿದೆ, ಅದು ಉನ್ನತ ಮಟ್ಟದಲ್ಲಿ ಅಗಲಿ. ಸುಳ್ಳು ಜಾತಿ ಪ್ರಮಾಣ ಪತ್ರ ಕೊಟ್ಟಿದ್ದರ ಬಗ್ಗೆ ತನಿಖೆ ಆಗುತ್ತಿರುವುದು. ಅದಕ್ಕೋಸ್ಕರ ಸಿಆರ್ ಇ ಸೆಲ್ ಇದೆ. ಅದರ ಮೂಲಕ ತನಿಖೆಯಾಗಲಿ ಎಂದು ನಮ್ಮ ಉದ್ದೇಶವಷ್ಟೆ. ಸಿಓಡಿ ತನಿಖೆ ಮಾಡತಕ್ಕಂತಹ ಅಗತ್ಯವಿಲ್ಲ. ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ದಯಮಾಡಿ ನೀವು ಹೇಳಿರತಕ್ಕಂತಹ ಸಿಓಡಿ ತನಿಖೆ ವಾಪಸ್ ಪಡೆಯಬೇಕೆಂದು ನಾನು ಆಗ್ರಹ ಮಾಡುತ್ತೇನೆ.

**ಶ್ರೀ ಎಸ್.ಎಸ್. ಪಾಟೀಲ್:** ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆಂಜನೇಯರವರು ಹೇಳಿದ್ದೆಲ್ಲಾ ನಿಜ ಇದೆ. ಎಸ್‌ಸಿ ಎಂದು ಸುಳ್ಳು ಸರ್ಟಿಫಿಕೇಟ್ ಕೊಟ್ಟು ಅವನು ಅಧ್ಯಕ್ಷನಾಗಿದ್ದಾನೆ. ಈಗ ಎಸ್‌ಸಿಗಳು ಎಲ್ಲ ಸತ್ಯಾಗ್ರಹ ಮಾಡಿ ತಹಶೀಲ್ದಾರ್ ಆಫೀಸಿಗೆ ಮುತ್ತಿಗೆ ಹಾಕಿ ಹೋರಾಟ ಮಾಡಿದ್ದಾರೆ. ಒಬ್ಬರಿಗೆ ಸುಳ್ಳು ಸರ್ಟಿಫಿಕೇಟ್ ಕೊಡುತ್ತಾರೆ. ಅವನು ಎಸ್‌ಸಿ ಅಲ್ಲ, ಏನೋ ಒಂದು ಸುಮ್ಮನೆ ಎನ್ಕ್ವೈರಿ ಮಾಡಿದ ಹಾಗೆ ಮಾಡಿ ಸುಳ್ಳು ಸರ್ಟಿಫಿಕೇಟ್ ಕೊಟ್ಟು ಅವನು ಈಗ ಪಂಚಾಯಿತಿ ಅಧ್ಯಕ್ಷನಾಗಿದ್ದಾನೆ. ಇದು ನಡೆಯುತ್ತಿದೆ. ನೀವು ರಾಜ್ಯದಲ್ಲಿ ಇಂತಹ ಮಾಹಿತಿ ತರಿಸಿ ಕ್ರಮ ತೆಗೆದುಕೊಳ್ಳಿ.

**ಶ್ರೀ ಎಸ್. ರಾಜೇಂದ್ರನ್** : ಮಾನ್ಯ ಉಪಾಧ್ಯಕ್ಷರೆ, ಈಗ ಚರ್ಚೆ ಏನೆಂದರೆ, ಸಿಓಡಿಗೆ ಕೊಡಬೇಕು ಇಲ್ಲ ಎಂದು. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು, ಸಿಓಡಿಗೆ ಕೊಡಬೇಕೆಂದು ಸಿಓಡಿಗೆ ಕೊಡುವುದಕ್ಕೆ ನಾವು ಯಾರೂ ಅಡ್ಡ ಬರಲಿಲ್ಲ. ಕೊಡಿ' ಏನು ಹೇಳುತ್ತೇನೆಂದರೆ, if you have given.....ಕೊಟ್ಟಿದ್ದರೆ

ಅದನ್ನು ವಾಪಸ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ' ಕೊಟ್ಟಿಲ್ಲ ಎಂದರೆ, ತಾವು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು through CRE cell give that to COD including CBI also, no problem.

**ಶ್ರೀ ಹೆಚ್. ಆಂಜನೇಯ :** ಉಪಾಧ್ಯಕ್ಷರೆ, ನಾವು ಅಪರಾಧಿಗಳನ್ನು ರಕ್ಷಣೆ ಮಾಡುವುದಕ್ಕೆ ಹೋಗುತ್ತಿಲ್ಲ.

**ಉಪಾಧ್ಯಕ್ಷರು:** ಅವರು ಹೇಳುತ್ತಾರೆ ಕೂತುಕೊಳ್ಳಿ.

**ಡಾ. ವೈ. ನಾಗಪ್ಪ :** ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಹೇಳಿದೆ, ಇದು ಏನಾಗುತ್ತದೆ ಎಂದರೆ, ನನಗೆ ಗೊತ್ತು. ಸಿಓಡಿಗೆ ಈ ತನಿಖೆಗೆ ಆದೇಶ ಮಾಡಿದರೆ ಅವರು ಪ್ರತಿಯೊಂದು ಹಂತದಲ್ಲಿ ಆಫೀಸ್‌ನಲ್ಲಿ ಎಲ್ಲ ರೆಕಾರ್ಡ್ಸ್ ಸೀಸ್ ಮಾಡಿಕೊಂಡು ಹೋಗುತ್ತಾರೆ ಆ ರೆಕಾರ್ಡ್ಸ್ ಸೀಸ್ ಆದರೆ ಪರಿಶಿಷ್ಟ ಜಾತಿ ಮತ್ತು ವರ್ಗದ ಫಲಾನುಭವಿಗಳಿಗೆ ತೊಂದರೆಯಾಗುತ್ತದೆ. ಆ ಒಂದು ಇಲಾಖೆಯ ಕೆಲಸ ಸ್ಥಗಿತವಾಗುತ್ತದೆ. ಅದನ್ನೆಲ್ಲಾ ನಾನು ಕೂಲಂಕಷವಾಗಿ ಯೋಚನೆ ಮಾಡಿ ಚಿಂತನೆ ಮಾಡಿದೆ, ನಾನು ಇಲಾಖೆಯಿಂದ ತನಿಖೆ ಮಾಡುತ್ತೇನೆಂದು ಹೇಳಿದಾಗ ಸದಸ್ಯರು ಯಾರೂ ಆ ದಿವಸ ಒಪ್ಪಲಿಕ್ಕೆ ತಯಾರಿರಲಿಲ್ಲ. ಆ ದೃಷ್ಟಿಯಿಂದ ಇಲ್ಲಿ ನಾವು ಸಿಓಡಿ ತನಿಖೆಗೆ ಒಪ್ಪಿದ್ದೇವೆ ಹೊರತು, ಬಹುಶಃ ನನಗನ್ನಿಸುತ್ತದೆ ಸಿಓಡಿ ತನಿಖೆಗೆ ಕೊಡುವಷ್ಟು ಅಪರಾಧ ಅಲ್ಲಿ ಏನೂ ಆಗಿಲ್ಲ.

**ಉಪಾಧ್ಯಕ್ಷರು :** ಅವರು ಉತ್ತರ ಮುಗಿಸಿಲ್ಲ. ಹೆಗಡೆಯವರೇ, ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಅರಗ ಜ್ಞಾನೇಂದ್ರ :** ಅದು ರೆಕಾರ್ಡ್ ಆಗುತ್ತದೆ. ಕೇವಲ ಒಂದು ವಾರದಲ್ಲಿ ಬೇರೆ ಬೇರೆ ಮಾತನಾಡಿದರೆ ಹೇಗಾಗುತ್ತದೆ? ನಮಗೆ ಯಾರಿಗೂ ಕೂಡ ಅಮಾಯಕರಿಗೆ ಶಿಕ್ಷೆ ಆಗಬೇಕೆಂದು ಇಲ್ಲವಲ್ಲ. ಅ ಅಧಿಕಾರಿ ಪ್ರಾಮಾಣಿಕರಾಗಿದ್ದರೆ ಅವರ ರಕ್ಷಣೆಗೆ ನಾವೂ ಬರುತ್ತೇವೆ. ಎರಡು – ಮೂರು ದಿವಸಗಳಿಂದ ಯಾರು ಅಧಿಕಾರಿಗಳಿದ್ದಾರೆ ಅವರು ದೊಡ್ಡ ಲಾಬಿ ಮಾಡುತ್ತಿದ್ದಾರೆ. ಇದಕ್ಕೆ ಯಾರೂ ಕೂಡ ಮಣಿಯಬಾರದು. ದಲಿತರಿಗೆ, ಸಾಮಾನ್ಯ ಜನರಿಗೆ ಆ ದುಡ್ಡು ಹೋಗಬೇಕು. ಅವರಿಗೆ ಅನ್ಯಾಯವಾಗುತ್ತಿದೆ. ಬೆಂಗಳೂರಿನಲ್ಲಿ ತಿಂದು ತೇಗುವವರು ಎಲ್ಲ ಸೇರಿಕೊಂಡು ಲಾಬಿ ಮಾಡುತ್ತಾರೆಂದರೆ, ಅವರಿಗೆ ಸಿಓಡಿ ಅಲ್ಲ ಸಿಬಿಐಗೆ ಕೊಟ್ಟರೂ ಚಿಂತೆ ಇಲ್ಲ. ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ. ದಲಿತರಿಗೆ ನ್ಯಾಯ ಸಿಗಬೇಕಾಗುತ್ತದೆ. ದಯವಿಟ್ಟು ಇದನ್ನು ಮಾಡಬಾರದು.

**ಶ್ರೀ ಆರ್. ಅಶೋಕ್ (ಉತ್ತರ ಹಳ್ಳಿ):** ಮಾನ್ಯ ಉಪಾಧ್ಯಕ್ಷರೆ, ಅವತ್ತು ನಾನು ಈ ಪ್ರಶ್ನೆ ಕೇಳಿ ಏನೇನು ಅವ್ಯವಹಾರ ಆಗಿದೆ ಎಂದು ಬಿಡಿಸಿ ಹೇಳಿದ್ದೇನೆ. ಆ ದಾಖಲೆಗಳನ್ನು ಕೊಟ್ಟಿದ್ದೇನೆ. ನಾನೇನು ಹಾಗೆಯೇ ಸುಮ್ಮನೆ ಅಪಾದನೆ

ಮಾಡಿಲ್ಲ. ದಾಖಲೆಗಳನ್ನು ಸಹ ಕೊಟ್ಟಿದ್ದೇನೆ. ಸಜ್ಜನ್ ಏನ ರಿಪೋರ್ಟ್ ಕೊಟ್ಟಿದ್ದಾರೆ ಅದು 100ಕ್ಕೆ 75 ಪರ್ಸೆಂಟ್ ಬೋಗಸ್ ಆಗಿದೆ ಅದರ ಬಗ್ಗೆ ತನಿಖೆ ಆಗಬೇಕೆಂದು ಹೇಳಿದೆ. ಅವರಿಗೆ ಇಲಾಖೆ ಮಟ್ಟದಲ್ಲಿ ತನಿಖೆ ಮಾಡುವುದಕ್ಕೆ ಹೇಳಿದರೂ ಇಲ್ಲಿ 13 ಕೋಟಿ ರೂಪಾಯಿ ಅವ್ಯವಹಾರ ಆಗಿದೆ. ಸಣ್ಣ ಪುಟ್ಟ ಅವ್ಯವಹಾರ, ಎಂದು ಮಂತ್ರಿಗಳು ಹೇಳಿರುತ್ತಾರೆ. 13 ಕೋಟಿ ರೂಪಾಯಿಗಳ ಅವ್ಯವಹಾರ, ಯಾರು ನಿಷ್ಪಾವಂತ ಅಧಿಕಾರಿಗಳು ಇದ್ದಾರೆ ಅವರು ಅಧ್ಯಕ್ಷರು ಇರಬಹುದು, ಕಮಿಷನರ್ ಇರಬಹುದು, ಅವರ ಬಗ್ಗೆ ನನಗೆ ಏನೂ ಇಲ್ಲ. ನೀವು ಅವರ ಬಗ್ಗೆ ಏನು ತನಿಖೆ ಮಾಡಬೇಡಿ. ನಾನು ಹೇಳಿರುವುದು 1998 ರಿಂದ 2003ನೇ ಇಸವಿವರೆಗೆ ಇದನ್ನು ಪರ್ಟಿಕ್ಯುಲರ್ ಆಗಿ ಹೇಳುತ್ತಿದ್ದೇನೆ. 2003ನೇ ಇಸವಿವರೆಗೆ ಆಗಿರತಕ್ಕಂಥಹ ಅವ್ಯವಹಾರ 13 ಕೋಟಿ ರೂಪಾಯಿ ಇದು ತನಿಖೆ ಆಗಬೇಕೆಂದು ಹೇಳಿದ್ದು, ಬೇರೆ 2003 ರಿಂದ 2005ರಂದು ಅಲ್ಲ. 2003ರವರೆಗೆ ಏನು ಅವ್ಯವಹಾರವಾಗಿದೆ ಎರಡೂವರೆ ಸಾವಿರ ಆಟೋ ರಿಕ್ಷಾಗಳು ಬಡವರಿಗೆ ತಲುಪಬೇಕಾದ ಆಟೋ ರಿಕ್ಷಾ ಮತ್ತು ಸರ್ಕಾರ ಪ್ರತಿ ವರ್ಷ ಕೊಡುವ ಅನುದಾನ. ಈ ವರ್ಷವೂ ಬಜೆಟ್ ನಲ್ಲಿ ಸರ್ಕಾರ ಎಸ್.ಸಿ. ಎಸ್.ಟಿ.ಗೆ ಅನುದಾನ ಕೊಟ್ಟಿದೆ. ಅನುದಾನ ಎಲ್ಲಾ ಮಧ್ಯವರ್ತಿಗಳ ಪಾಲಾದರೆ ಸರ್ಕಾರ ಏಕೆ ಅನುದಾನ ಕೊಡಬೇಕು? ಸರ್ಕಾರ ಕೊಡುವುದು ಆ ಜನಾಂಗಕ್ಕೆ ತಲುಪಬೇಕೆಂದು, ಫಲಾನುಭವಿಗಳಿಗೆ ಕೊಡಬೇಕೆಂದು. ಅಲ್ಲಿ ಅವ್ಯವಹಾರವಾಗುತ್ತಿದೆ. ತನಿಖೆ ಆ ಮಟ್ಟದಲ್ಲಿ ಅಲ್ಲ, ಆ ಮಟ್ಟ ಮುಟ್ಟುವಂತಹ ಶಕ್ತಿ ಅಲ್ಲಿ ಇಲ್ಲ, ಯಾರೂ ಅಲ್ಲಿ ಛೇರ್ಮನ್ ಆಗಬೇಕು, ಯಾರು ಕಮಿಷನರ್ ಆಗಬೇಕು, ಯಾರು ಫೀಲ್ಡ್ ಆಫೀಸರ್ ಬರಬೇಕು ಎಂದು ಯಾರೂ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಇರುವವರೇ ತೀರ್ಮಾನ ಮಾಡುತ್ತಾರೆ. ಆ ರೀತಿ 13 ಕೋಟಿ ಹಣ ತಿಂದಿರತಕ್ಕಂತಹ ಹಣ ಅವರು ಅಷ್ಟು ಶಕ್ತಿವಂತರಾಗಿದ್ದಾರೆ. ಆ ಆಫೀಸ್ ಏನಾಗಿದೆ, ನಮ್ಮ ಗೌರ್ನಮೆಂಟ್ ಆಫೀಸ್ ಆಗಿ ಉಳಿದಿಲ್ಲ. ನಾನು ಮೊನ್ನೆ ಕೂಡ ಹೇಳಿದ್ದೇನೆ. ಈಗಾಗಲೇ ಒಂದು ಕಂಪ್ಲೇಂಟ್ ಬಂದಿದೆ. ಅಲ್ಲಿನ ಫೀಲ್ಡ್ ಆಫೀಸರ್ ಒಬ್ಬರು ಕಂಪ್ಲೇಂಟ್ ಕೊಟ್ಟಿದ್ದಾರೆ. ನನ್ನ ಮೇಲೆ ಹೊಡೆಯುವುದಕ್ಕೆ ಬಂದಿದ್ದರು, ನನಗೆ ಹಿಡಿದು ಎಳೆದಾಡಿದರು ಎಂದು ಒಬ್ಬ ಮಹಿಳಾ ಫೀಲ್ಡ್ ಅಫೀಸರ್ ನಿಮ್ಮ ಹೆಡ್ ಆಫ್ ದ ಡಿಪಾಟಮೆಂಟ್ ಗೆ ಕೊಟ್ಟಿದ್ದಾರೆ. ಅದು ಗೂಂಡಾಗಿರಿ ಆಫೀಸ್ ಆಗಿದೆ. ಎಸ್ ಸಿ ಎಸ್ ಟಿ ಆಫೀಸ್ ಆಗಿಲ್ಲ. ಆದ್ದರಿಂದ ಇದನ್ನು ಸಿಓಡಿ ತನಿಖೆ ಆಗಬೇಕೆಂದು ಆಗ್ರಹ ಮಾಡಿದ್ದೇನೆ. ನೀವು ಒಪ್ಪಿಕೊಂಡಿದ್ದೀರಿ. ಮತ್ತೆ ಇದನ್ನು ವಾಪಸ್ ತೆಗೆದುಕೊಂಡರೆ ದಯವಿಟ್ಟು ಸರ್ಕಾರಕ್ಕೆ ನಾಳೆ ಒಳ್ಳೆಯದಾಗುವುದಿಲ್ಲ. ಏನೋ ಹೇಳುವುದು ಮತ್ತೆ ಏನೋ ಬದಲಾವಣೆಗೆ ವಾಪಸ್ ತೆಗೆದುಕೊಳ್ಳುವುದು ಎಂದರೆ ಹೇಗೆ? ಸರ್ಕಾರ ಏಕೆ ಇರಬೇಕು? ಇವತ್ತು ಏನೋ ಸ್ಟೇಟ್‌ಮೆಂಟ್ ಕೊಡುತ್ತೀರಿ, ನಾಳೆ ಏನು ಗ್ಯಾರಂಟಿ

ನೀವು ಮಾಡಿದ ಸ್ಟೇಟ್‌ಮೆಂಟ್‌ಗೆ ಸ್ಟಿಕ್ ಅನ್ ಆಗುತ್ತೀರಿ ಎಂದು. ಅದಕ್ಕೆ ದಯವಿಟ್ಟು ಇದು ಸರಿಯಲ್ಲ. ಈಗ ಏನು ಸಿಓಡಿ ತನಿಖೆಗೆ ಕೊಟ್ಟಿದ್ದೀರಿ ಅದು ಕೊಡಿ. 2003ನೇ ಇಸವಿವರೆಗೆ ಆಗಿರುವಂತಹ ಅವ್ಯವಹಾರಕ್ಕೆ ಸಿಓಡಿ ತನಿಖೆಗೆ ತಾವು ಆದೇಶ ಮಾಡಿದ್ದೀರಿ. ಅದು ಯಾವುದೇ ಕಾರಣಕ್ಕೆ ಹಿಂದಕ್ಕೆ ಬರಬಾರದು.

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಯಾರಾದರೂ ಒಬ್ಬ ಸದಸ್ಯರಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು. ಶೂನ್ಯ ವೇಳೆಯಲ್ಲಿ ಒಬ್ಬ ಸದಸ್ಯರಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ಈ ರೀತಿ ಚರ್ಚೆ ಪ್ರಾರಂಭವಾದರೆ ನಾಳೆ ಶೂನ್ಯ ವೇಳೆ ಹೇಗೆ ನಡೆಯುವುದು?

**ಶ್ರೀ ಬಿ.ಎಸ್. ಯಡಿಯೂರಪ್ಪ** : ಎರಡು ಶೂನ್ಯ ವೇಳೆ ಒಂದೇ ದಿವಸ ಪ್ರಸ್ತಾಪ ಮಾಡಿದಿರಿ, ಒಬ್ಬರಿಗೆ ಒಂದು ದಿನ ಒಂದು ಶೂನ್ಯ ವೇಳೆಗೆ ಅವಕಾಶ ಸಿಗುವುದಿಲ್ಲ. ಅವರಿಗೆ ಎರಡು ಅವಕಾಶ ಸಿಕ್ಕಿ ಎರಡು ವಿಷಯ ಪ್ರಸ್ತಾಪ ಮಾಡಿದರು. ಉತ್ತರ ತೆಗೆದುಕೊಂಡರು. ಈ ತತ್ತ್ವ ಸಿದ್ಧಾಂತ ಆಗ ಇರಲಿಲ್ಲವಾ?

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ನಾನು ಹೇಳುತ್ತಿರುವುದು ಆ ರೀತಿ ಅಲ್ಲ, ಎಲ್ಲರೂ ಚರ್ಚೆ ಮಾಡುವುದು ಅಲ್ಲ, ಶೂನ್ಯ ವೇಳೆಯಲ್ಲಿ.

**(ಗೊಂದಲ)**

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ಶೂನ್ಯ ವೇಳೆಯಲ್ಲಿ ಒಂದು ವಿಚಾರದ ಬಗ್ಗೆ ಒಬ್ಬರು ಎತ್ತಬಹುದು. ಆದರೆ ಚರ್ಚೆ ಮಾಡುವ ಹಾಗೆ ಇಲ್ಲ. ಯಾರು ಪ್ರಸ್ತಾಪ ಮಾಡಿದರು ಅವರಿಗೆ ಅವಕಾಶ ಕೊಡಿ. ನಾಯ್ಡುರವರಿಗೆ ಏಕೆ ಅವಕಾಶ ಕೊಡಲಿಲ್ಲ? ನಿಮ್ಮ ಪ್ರಶ್ನೆಗೆ ಅವರು ಉತ್ತರ ಕೊಡಬೇಕು. ದಯವಿಟ್ಟು ಕೂತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ. ಅದನ್ನೇ ಪದೇ ಪದೇ ರಿಪೀಟ್ ಮಾಡಬೇಡಿ.

**ಡಾ. ವೈ. ನಾಗಪ್ಪ:** ತಾವೆಲ್ಲಾ ಹೇಳಿದ್ದು ಆಯಿತು ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಉಪಾಧ್ಯಕ್ಷರು:** ನೀವೆಲ್ಲಾ ಹೇಳಿದ್ದು ಆಯಿತು, ಮತ್ತೆ ಏಕೆ ಪದೇ ಪದೇ ಏಳುತ್ತೀರಿ, ಅವರು ಏನು ಹೇಳುತ್ತಾರೆಂದು ಆದರೂ ಕೇಳಿ. ಅವರು ಏನು ಹೇಳುತ್ತಾರೆಂದು ಕೇಳದೆ ಹೋದರೆ ಬರೀ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ವಿಷಯ ಪ್ರಸ್ತಾಪವಾಗಿದ್ದು ಅಲ್ಲ, ಮುಖ್ಯಮಂತ್ರಿಗಳು ಇದ್ದಾರೆ, ಎಲ್ಲರೂ ಇದ್ದಾರೆ, ಅಶೋಕ್‌ರವರು ಅದನ್ನು ಪ್ರಸ್ತಾಪ ಮಾಡಿದರು, ಈಗಾಗಲೇ ಡಿಪಾರ್ಟ್‌ಮೆಂಟಲ್ ಎನ್ಕ್ವೈರಿ ಸಜ್ಜನ್ ಎಂಬ ಅಧಿಕಾರಿಗಳಿಂದ ಆಗಿದೆ, ಈಗ ಸಿಓಡಿಗೆ ರೆಫರ್ ಮಾಡಿ ಆಗಿದೆ, ತನಿಖೆ ಆಗಲಿ, ಸತ್ಯ ಈಚೆ ಬರಲಿ. ಎಸ್‌ಸಿ ಜನಾಂಗಕ್ಕೆ ಎಸ್‌ಟಿ ಜನಾಂಗಕ್ಕೆ ಏನು ಆಟೋರಿಕ್ಷಾ ಕೊಡದೆ ದುರುಪಯೋಗವಾಗಿದೆ, ಆ ಸತ್ಯ ಈಚೆಗೆ ಬರಲಿ. ಇವತ್ತಿನ ಪ್ರಸೆಂಟ್ ಅಧಿಕಾರಿಗಳ ಮೇಲೆ ಯಾರೂ ಛಾರ್ಜ್ ಮಾಡುತ್ತಿಲ್ಲ. ಆ ಪೀರಿಯಡ್‌ನಲ್ಲಿ ಆಗಿರುವ ಸತ್ಯ ಈಚೆ ಬರಲಿ. ಎಂದರೆ, ಸದನದಲ್ಲಿ ಅದನ್ನು ಒಪ್ಪಿಕೊಂಡು ಆದ ಮೇಲೆ ಮತ್ತೆ ಅದನ್ನು ಚರ್ಚೆ ಮಾಡುತ್ತೇವೆ ಎಂದರೆ ಒಳ್ಳೆಯ ಸಂಪ್ರದಾಯ ಅಲ್ಲ. ಇದರಿಂದ ನಿಮ್ಮ ಬಗ್ಗೆ ಜನ ಅನುಮಾನ ಪಡುವುದಕ್ಕೆ ಅವಕಾಶ ಮಾಡಿ ಕೊಡಬೇಡಿ.

**ಡಾ. ವೈ. ನಾಗಪ್ಪ :** ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಯಾರ ಮೇಲೆ ಅನುಮಾನ ಪಡುವ ಅವಶ್ಯಕತೆ ಇಲ್ಲ. ನಿನ್ನೆ ಮೊನ್ನೆ ತಾವು ವಿರೋಧ ಪಕ್ಷಗಳಲ್ಲಿ ಇರುವವರು ಎಲ್ಲ ಸನ್ಮಾನ್ಯ ಸದಸ್ಯರು ಒಕ್ಕೊರಲಿನಿಂದ ಈ ಪ್ರಶ್ನೆ ಹಾಕಿ ಇವತ್ತು ನಿಮ್ಮಲ್ಲಿಯೇ ಭಿನ್ನಾಭಿಪ್ರಾಯ ಇದೆ. ಇವೊತ್ತು ನಿಮ್ಮಲ್ಲಿಯೇ ಭಿನ್ನಾಭಿಪ್ರಾಯವಿದೆ. ವಿರೋಧ ಪಕ್ಷದಲ್ಲಿರತಕ್ಕಂಥ ಸದಸ್ಯರುಗಳಲ್ಲಿ ಕೆಲವರು ಬೇಡ ಎಂದು ಹೇಳುತ್ತಾರೆ, ಕೆಲವರು ಬೇಕು ಎಂದು ಹೇಳುತ್ತಾರೆ. ಈಗಾಗಲೇ ತನಿಖೆ ಮಾಡಿದೆ. ಇದನ್ನು ಮರುಪರಿಶೀಲನೆ ಮಾಡುವುದಕ್ಕೆ ಬಿಡಿ. ನಾವು ವ್ಯವಸ್ಥೆ ಮಾಡುತ್ತೇವೆ.

(ಕೆಲವು ಸದಸ್ಯರುಗಳು ತಮ್ಮ ಸ್ಥಾನ ಬಿಟ್ಟು ಮುಂದೆ ಬರುತ್ತ ಒಟ್ಟಿಗೆ ಮಾತನಾಡುತ್ತಿದ್ದರು.)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಖರ್ಗೆಯವರೆ ತಾವು ಹಿರಿಯ ಸಚಿವರು ಇದ್ದೀರಿ. ತಾವೂ ಕೂಡ ಹಿರಿಯ ಸಚಿವರಾಗಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲಿ ಇದ್ದಾರೆ. ಇಲ್ಲಿ ಸಿ.ಓ.ಡಿ. ತನಿಖೆಯನ್ನು ಮಾಡಿಸುತ್ತೇವೆ ಎಂದು ಒಪ್ಪಿಕೊಂಡು ಮತ್ತೆ ಹಿಂದಕ್ಕೆ ವಾಪಸ್ ಹೋಗುವುದು ಎಷ್ಟರ ಮಟ್ಟಿಗೆ ಸರಿ ಹೇಳಿ, ಇದನ್ನು ನಾವು ಒಪ್ಪುವುದಿಲ್ಲ.

(ಬಿ.ಜೆ.ಪಿ.ಯ ಶ್ರೀ ವಿಶ್ವೇಶ್ವರ ಹೆಗಡೆ, ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಶ್ರೀ ಆರ್. ಅಶೋಕ್, ಶ್ರೀ ಶಿವಣ್ಣ ಮತ್ತು ಅರಗ ಜ್ಞಾನೇಂದ್ರರವರುಗಳು ಸರ್ಕಾರದ ಉತ್ತರವನ್ನು ಒಪ್ಪದೇ ಸದನದ ಬಾವಿಗೆ ಧರಣಿ ಮಾಡಲು ಬರುತ್ತಿದ್ದರು.)

**ಉಪಾಧ್ಯಕ್ಷರು** :– ಮಾನ್ಯ ಕೈಗಾರಿಕಾ ಸಚಿವರಾದ ಮಾನ್ಯ ಸಿಂಧ್ಯಾರವರು ಎಲ್ಲಾ ಸದಸ್ಯರಿಗೆ ಊಟಕ್ಕೆ ಕರೆದಿದ್ದಾರೆ. ಊಟದ ವ್ಯವಸ್ಥೆಯನ್ನು ಬ್ಯಾಂಕ್ವೆಟ್ ಹಾಲ್ ನಲ್ಲಿ ಮಾಡಲಾಗಿದೆ. ಈಗ ಸದನವನ್ನು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

( ಸದನವು ಮಧ್ಯಾಹ್ನ 2 ಗಂಟೆ 01 ನಿಮಿಷಕ್ಕೆ ಮುಂದೂಡಿ ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನರ್ ಸಮಾವೇಶಗೊಳ್ಳಲು ಉಪಾಧ್ಯಕ್ಷರು ನಿಶ್ಚಯಿಸಿದರು.)

(ಮತ್ತೆ ಸದನವು ವಧ್ಯಾಹ್ನ 3.12 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಸದನದ ಬಾವಿಯಲ್ಲಿ ಬಿ.ಜೆ.ಪಿ.ಯ ಕೆಲವು ಸದಸ್ಯರುಗಳು ಧರಣಿ ನಡೆಸಿದ್ದರು)

**ಶ್ರೀಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಸದನದಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರು ವಿಷಯವನ್ನು ಸಿ.ಓ.ಡಿ. ವಹಿಸಿಕೊಡುತ್ತೇನೆಂದು ಹೇಳಿದ್ದರು. ಇವತ್ತು ಅವರು ಮರು ಪರಿಶೀಲನೆಯನ್ನು ಮಾಡುತ್ತೇವೆಂದು ಉತ್ತರವನ್ನು ಕೊಡುತ್ತಿದ್ದಾರೆ. ಸರ್ಕಾರವೂ ಒಂದೊಂದು ನಿಮಿಷಕ್ಕೆ, ಒಂದೊಂದು ಗಂಟೆಗೆ, ಒಂದೊಂದು ದಿವಸಕ್ಕೆ, ಒಂದೊಂದು ಧೋರಣೆಯತ್ತ ಹೋಗುವಂತಹ ಸ್ಥಿತಿಯನ್ನು ಕರ್ನಾಟಕ ರಾಜ್ಯದ ಜನರು ಯಾವುದೇ ಕಾರಣಕ್ಕೂ, ಸರ್ಕಾರದ ಈ ನಿಲುವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ರಾಜ್ಯ ಸರ್ಕಾರದ ಸ್ಪಷ್ಟವಾದಂತಹ ಅಭಿಪ್ರಾಯವನ್ನು ನಾನು ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಕೇಳಲಿಚ್ಚಿಸುತ್ತೇನೆ. ಇಲ್ಲಿ ನಿಮ್ಮ ಅಭಿಪ್ರಾಯ ಏನು? ಏಕೆಂದರೆ ಇಲ್ಲಿ ನಮ್ಮ ಶಾಸಕರು ಧರಣಿಗೆ ಕುಳಿತಿದ್ದಾರೆ. ಮಾನ್ಯ ಸಚಿವರು ಈ ರೀತಿಯಾಗಿ ಹೇಳಿಕೆಯನ್ನು ಕೊಟ್ಟು ಹೋಗಿದ್ದಾರೆ. ಆದುದರಿಂದ ಸರ್ಕಾರವೂ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು, ಇದನ್ನು ಮುಗಿಸಬೇಕಾಗುತ್ತದೆ, ಇಲ್ಲವೆಂದರೆ ಇದರ ಬಗ್ಗೆ ತಾವು ತೀರ್ಮಾನ ಮಾಡಬೇಕಾಗುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೇ, ನಾವು ಯಾವುದೇ ಅಧಿಕಾರಿಯನ್ನು ಯೀಲ್ಡ್ ಮಾಡಬೇಕೆಂದು, ನಾವು ಇಲ್ಲಿ ಮಾತನಾಡಿಲ್ಲ. ಈ 2003ರವರೆಗೆ ಏನು ಹಗರಣಗಳೂ ಆಗಿತ್ತು. ಅವುಗಳ ತನಿಖೆಯಾಗಬೇಕೆಂದು, ಆ ಅವಧಿಯ ತನಿಖೆಯನ್ನು ನಾವು ಯಾರು ಬೇಡವೆಂದು ಹೇಳಿಲ್ಲ. ಈ ತಕ್ಷಣ ಸಿ.ಓ.ಡಿಯನ್ನು ಹಾಕಿದರೆ ಇನ್‌ಕ್ಯುಬೆಂಟ್ ಆಫೀಸರ್ ಅದು ಆದ ನಂತರ ಜಾಯಿನ್ ಆದಂತಹ ಅಧಿಕಾರಿ ಮೇಲೆ ವೃಥಾ ಗದಾ ಪ್ರಹಾರವಾಗುತ್ತದೆ. ಎರಡನೆಯದಾಗಿ ಇಡೀ ಕಾರ್ಪೋರೇಷನ್‌ನ ಕೆಲಸ ಕಾರ್ಯಗಳು ಸ್ಥಗಿತ ಆಗಬಹುದು, ರೆಕಾರ್ಡ್ಸ್ ಎಲ್ಲಾ ಸೀಜ್ ಆಗಿ, ಆದುದರಿಂದ ಬೇರೆ ರೀತಿಯ ಡಿಪಾರ್ಟ್‌ಮೆಂಟ್ ಎನ್‌ಕ್ವಯರಿ ಮಾಡಿಸಿಕೊಡುವಂಥದ್ದಕ್ಕೆ ಅವಕಾಶವನ್ನು ಮಾಡಿಕೊಡಿ, ಎಂದು ಕೇಳಿದ್ದೇವೆ. ನಾನು ನಮ್ಮ ಬಿ.ಜೆ.ಪಿ. ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ನಾವೆಲ್ಲರು ಒಂದೇ. ಇದರಲ್ಲಿ ಸೀಜ್ ಮಾಡಿ ನಮಗೆ ಆಗಬೇಕಾದ್ದು ಏನು ಇಲ್ಲ. ಈ ಮನುಷ್ಯ ಬಂದಮೇಲೆ ಆಗಿದೆಯೆಂದು ಯಾರು ಮಾತನಾಡಿಲ್ಲ. 2003ನೇ ಇಸವಿಯ ಹಿಂದೆ ಏನು ಆಗಿದೆ. ಅದರ ಬಗ್ಗೆ ತನಿಖೆ ಮಾಡುವುದಕ್ಕೆ ನಮ್ಮದು ಏನು ತಕರಾರು ಇಲ್ಲ. ಇನ್‌ಕ್ಯುಬೆಂಟ್ ಆಫೀಸರ್ ಅನ್ನು ಸುಮ್ಮನೆ ಇಂಟಿಮೈಜ್ ಮಾಡುವಂಥದ್ದು, ಸರಿಯಲ್ಲವೇನೋ, ಎಂದು ನಾವು ಮಾತನಾಡಿದ್ದೇವೆ. ನಾವು ಮಾತನಾಡಿರುವುದು ಅವರಿಗೆ ಇಷ್ಟವಾಗಿಲ್ಲವೆಂದರೆ ನಾನು ವಿತ್ ಡ್ರಾ ಮಾಡಿಕೊಳ್ಳುತ್ತೇನೆ. ದಯಮಾಡಿ ಅವರು ವಿತ್ ಡ್ರಾ ಮಾಡಿಕೊಂಡು ಈ ಕಡೆಗೆ ಬರಬೇಕೆಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಲ್ಲಿ ನಾನು ಹೇಳುವಂಥದ್ದು ಏನೆಂದರೆ, ನಮ್ಮ ಶಾಸಕರಾದ ಆರ್. ಅಶೋಕ್ ರವರು ತಿಳಿಸಿದ್ದಾರೆ. ಎಲ್ಲಾ ಶಾಸಕರುಗಳ ಅಭಿಪ್ರಾಯಗಳು ಇದೆ. ಈಗ 2003ರವರೆಗೆ ಏನೇನು ಆಗಿದೆ. ಅದರ ಬಗ್ಗೆ ಸರಿಯಾದ ತನಿಖೆಯಾಗಬೇಕು, ಶಿಕ್ಷೆಯಾಗಬೇಕು, ಎಂಬ ಅಭಿಪ್ರಾಯ ಇದೆ. ಇದರ ಬಗ್ಗೆ ತಾವು ಕೂಡ ಅವತ್ತು ಸ್ಪಷ್ಟವಾಗಿ ಸಿ.ಓ.ಡಿ. ತನಿಖೆಗೆ ಒಳಪಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತು ಯಾವುದೋ ಒಂದು ಒತ್ತಡಕ್ಕೆ ಮಣಿದು, ಏನಾದರೂ ವ್ಯತ್ಯಾಸವಾಗುತ್ತಾ ಇದೆಯಾ, ಎಂಬ ಅನುಮಾನವಾಗುತ್ತಿದೆ. ತಾವು ಸಿ.ಬಿ.ಐ. ತನಿಖೆಗೆ ಹೋಗುವಂತಹ ಮಾತನ್ನು ಸಹ ತಾವು ಹೇಳಿದ್ದೀರಿ. ಅದಕ್ಕೋಸ್ಕರ ನಾವು ಹೇಳುತ್ತಿರುವಂಥದ್ದು, ಇದು ಸಿ.ಬಿ.ಐ., ಸಿಓ.ಡಿ, ಇದೆಲ್ಲಾ ಬೇರೆ ಪ್ರಶ್ನೆ. ಯಾರು ಈ ರೀತಿಯಾಗಿ ದಲಿತರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಆಗುತ್ತಿರುವಂತಹ ಅನ್ಯಾಯದ ಬಗ್ಗೆ ಅವ್ಯವಹಾರವನ್ನು ಮಾಡಿದ್ದಾರೆ. ಅವರ ಬಗ್ಗೆ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ

ಇದರ ಬಗ್ಗೆ ನಿಮ್ಮ ನಿಲುವು ಏನು? ತಾವು ಇವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ. ಈ 2003ರವರೆಗೆ ಆಗಿರುವಂತಹ ಅವ್ಯವಹಾರಗಳ ಬಗ್ಗೆ ಏನು ನಿಲುವನ್ನು ತೆಗೆದುಕೊಳ್ಳುತ್ತಿಲ್ಲರೆಂಬ ಬಗ್ಗೆ, ಸ್ಪಷ್ಟವಾಗಿ ಹೇಳಿದರೆ, ಏನು ಮುಂದೆ ಏನು ಮಾಡಬಹುದೆಂಬ ಬಗ್ಗೆ ಯೋಚನೆಯನ್ನು ಮಾಡಬಹುದು. ಅದುದರಿಂದ ತಾವು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೇ, ಇಲ್ಲಿ ಗ್ಯಾಲರಿಯಲ್ಲಿ ಯಾರಾದರೂ ಒಬ್ಬರು ಆಫೀಸರ್ಸ್ ಇರಬೇಕಲ್ಲಾ, ತಾವು ನೋಡಿ. ಇಲ್ಲಿ ಸೆಕ್ರೆಟರಿಗಳು ಇಲ್ಲ ಡಿಪಾರ್ಟ್‌ಮೆಂಟ್‌ನ ಮುಖ್ಯಸ್ಥರು ಇಲ್ಲ. ಯಾರು ಒಬ್ಬರು ಇಲ್ಲ.

**ಅಧ್ಯಕ್ಷರು :** ಈಗ ಆಫೀಸರ್‌ಗಳಿಗೆ ಏನಾಗಿದೆಯೆಂದರೆ, ಇಲ್ಲಿ ಯಾರು ಶಾಸಕರುಗಳೂ ಇರುವುದಿಲ್ಲ. ನಾವು ಏಕೆ ಇರಬೇಕು? ಎನ್ನತಕ್ಕಂಥ ತೀರ್ಮಾನಕ್ಕೆ ಅವರು ಬಂದ ಹಾಗೆ ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ :** ಅವರು ಸಂಬಳವನ್ನು ತೆಗೆದುಕೊಂಡು ಕೆಲಸವನ್ನು ಮಾಡುವುದು, ಅವರು ಬರಬೇಕಲ್ಲಾ...

**ಅಧ್ಯಕ್ಷರು :** ಎಲ್ಲಕಿಂತ ಹೆಚ್ಚಾಗಿ ಶಾಸಕರು ಬರಬೇಕಲ್ಲಾ... ಆದುದರಿಂದ ಆ ರೀತಿ ಹೇಳಬಾರದೆಂದರೆ ಬಂದು ಇರಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ :** ಮಾನ್ಯ ನಾಗಪ್ಪನವರೇ, ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತಿರೆಂಬುದನ್ನು ಹೇಳಬೇಕು.

**ಡಾ. ವೈ. ನಾಗಪ್ಪ :** ಮಾನ್ಯ ಅಧ್ಯಕ್ಷರೇ, ಹಿಂದಿನ ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಯಿತು, ನಾನು ಪ್ರಸ್ತಾವನೆಯ ಮೂಲಕ ಉತ್ತರವನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಸಾಕಷ್ಟು ಇಲಾಖೆಯಿಂದಲೂ ತನಿಖೆ ಮಾಡಿರುವಂಥಾದ್ದು, ಈ ತನಿಖೆಯನ್ನು ಮಾಡಿದಾಗ, 112 ಜನರು ತಪ್ಪಿತಸ್ಥರು ಇದ್ದಾರೆಂದು, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ತೆಗೆದುಕೊಂಡು, ಇದರ ಬಗ್ಗೆ ನಾನು ಹೇಳಿದೆ, ವೈಯಕ್ತಿಕವಾಗಿ ಕ್ರಿಮಿನಲ್ ಕೇಸ್ ಎಂದು ಮಾಡಿ ಎಂದು ಹೇಳಿದೆ. ನಮ್ಮ ಸದಸ್ಯರಾದ ಆರ್. ಅಶೋಕ್‌ರವರು ಒಂದು ಪೇಪರ್ ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದಾರೆ. ಅವರು ಇದರಲ್ಲಿ ಏನು ಕೊಟ್ಟಿದ್ದಾರೆಂದರೆ, ಮಾನ್ಯ ಮುಖ್ಯಮಂತ್ರಿಯವರು ಸಿ.ಓ.ಡಿ. ತನಿಖೆಗೆ ಒಪ್ಪಿದ್ದಾರೆ, ಆದರೆ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಒಪ್ಪಿಲ್ಲವೆಂದು ತಿಳಿಸಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಇವತ್ತಿಗೂ ಮಾನ್ಯ ಮುಖ್ಯಮಂತ್ರಿಯವರು ಮೇಲ್ಮನೆಯಲ್ಲಾಗಲಿ, ಕೆಳಮನೆಯಲ್ಲಾಗಲಿ, ಪ್ರಶ್ನೆಯನ್ನು ಕೇಳಿಲ್ಲ. ಇದು ಮಾತ್ರ

ಸ್ಪಷ್ಟ. ಇದನ್ನು ಅವರು ಯಾವ ಪತ್ರಿಕೆಯಲ್ಲಿ ಓದಿದರೋ, ಎಲ್ಲಿ ಹೇಳಿದರೊ ನನಗೆ ಗೊತ್ತಿಲ್ಲ. ಅವರಿಗೆ ಗೊತ್ತಿರಬಹುದು. ನಾನಂತೂ ಅದನ್ನು ನಿರಾಕರಣೆ ಮಾಡುತ್ತಿದ್ದೇನೆ. ಮತ್ತೆ ನಾನು ಮೊನ್ನೆ ದಿವಸ ಒಪ್ಪಿಕೊಂಡದ್ದು ನಿಜ. ಇವರ ಒತ್ತಾಯಕ್ಕೆ, ಆದರೆ ಇವತ್ತು ಬೆಳಿಗ್ಗೆ ವಿರೋಧ ಪಕ್ಷದಲ್ಲಿ ಒಮ್ಮತವಿಲ್ಲ. ಕೆಲವು ಸದಸ್ಯರು ಸಿ.ಓ.ಡಿ. ತನಿಖೆ ಬೇಡವೆಂದು ಬಹಳಷ್ಟು ಸದಸ್ಯರು ಕೇಳಿಕೊಂಡರು. ಇನ್ನು ಕೆಲವರು ಇಲ್ಲ ಸಿ.ಓ.ಡಿ. ತನಿಖೆಯಾಗಬೇಕೆಂದು ಹೇಳುತ್ತಿದ್ದಾರೆ. ನಾನು ಇದನ್ನು ಇನ್ನು ಸಿ.ಓ.ಡಿ. ತನಿಖೆಗೆ ವಹಿಸಿಲ್ಲ. ಇದು ಮೊನ್ನೆ ಚರ್ಚೆಯಾದಂತಹ ವಿಷಯವಾಗಿದೆ. ನಾನು ಬೆಳಿಗ್ಗೆ ಸದನದಲ್ಲಿ ಏನು ಹೇಳಿದೆನೆಂದರೆ, ಆಯಿತು, ನಿಮ್ಮಲ್ಲೆ ಒಮ್ಮತವಿಲ್ಲ. ಇದನ್ನು ಇನ್ನೊಮ್ಮೆ ಪರಿಶೀಲನೆ ಮಾಡೋಣ, ನನಗೆ ವೇಳೆ ಕೊಡಿ, ನಾನು ಚಿಂತನೆ ಮಾಡಿ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇದು ಇಷ್ಟೆ ಹೇಳಿದ್ದು, ನಾನು ಇದನ್ನು ಆಗುತ್ತದೆ ಎಂದು ಹೇಳಿಲ್ಲ. ಬಿಡುತ್ತೇನೆಂದು ಹೇಳಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಮಾನ್ಯ ಅಧ್ಯಕ್ಷರೇ, ಇವರು ತಮ್ಮ ಹಿರಿಯ ಸಚಿವರನ್ನು ಕೇಳಲಿ, ಇಲ್ಲಿ ನಡೆದುಕೊಂಡು ಬಂದಿರುವಂತಹ ಸದ್‌ಸಂಪ್ರದಾಯ, ನಡೆದುಕೊಂಡು ಬಂದಿರುವಂಥಾದ್ದು.

**ಡಾ. ವೈ. ನಾಗಪ್ಪ :** ನನಗೂ ಗೊತ್ತು, ನಾನು ಕಳೆದ 30 ವರ್ಷಗಳಿಂದಲೂ ರಾಜಕೀಯದಲ್ಲಿ ಇದ್ದೇನೆ. reach of assurance ಆಗುತ್ತದೆ., ನನಗೂ ಗೊತ್ತಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಅದಕ್ಕೆ ನಾನು ಹೇಳಿದ್ದು. ನನಗೆ ಏನೆಂದರೆ ತಮಗೆ ಎರಡು ಸಂಗತಿಗಳನ್ನು ಒತ್ತಾಯ ಮಾಡುವಂಥಾದ್ದು, ಮೊದಲನೆಯದಾಗಿ ಈ ಕಡೆ ಇರುವವರು ಯಾರು ಏನು ಬೇಕಾದರೂ ಒತ್ತಾಯನ್ನು ಮಾಡಲಿ. ಅ ಇಷ್ಯೂ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಪಟ್ಟಂಥಾದ್ದು. ಈ ತನಿಖೆಯಿಂದ ಜನತೆಗೆ ಅನುಕೂಲವಾಗುತ್ತದೆ. ಇಲ್ಲಿ ಯಾರೊ ಅಧಿಕಾರಿಯನ್ನು ಉಳಿಸುವಂತಾದ್ದು ಅಲ್ಲ. ಇಲ್ಲಿ ಇರುವಂತಹ ಪ್ರಶ್ನೆ ಸಾವಿರಾರು ಜನ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ಇದು ಜಗತ್‌ಜಾಹೀರವಾದಂತಹ ಸಂಗತಿಯಾಗಿದೆ. ಈ ಸಮಯದಲ್ಲಿ ಸಾಕಷ್ಟು ಚರ್ಚೆ ಆದ ಮೇಲೆ, ನೀವು ಸಿ.ಓ.ಡಿ. ತನಿಖೆಗೆ ರೆಫರ್ ಮಾಡುತ್ತೇನೆಂದು ಹೇಳಿದ ಮೇಲೆ, ಈ ಮನೆಯಲ್ಲಿ ಆ ರೀತಿಯಾಗಿ ಭರವಸೆಯನ್ನು ಕೊಟ್ಟ ಮೇಲೆ, ಮತ್ತೆ ಆ ವಿಷಯ ಮತ್ತೆ ಪ್ರಸ್ತಾಪವಾಗಬಾರದು. ಇವತ್ತು ಯಾವುದೇ ಸೂಚನೆಯನ್ನು ಕಳುಹಿಸಿಲ್ಲ. ಇದನ್ನು ಶೂನ್ಯ ವೇಳೆಯಲ್ಲಿ ಇದು ಏಕೆ ಪ್ರಸ್ತಾಪವಾಯಿತು, ಗೊತ್ತಿಲ್ಲ. ಇದು ನಮಗೆ

ಆಶ್ಚರ್ಯ, ನೀವು ಒಂದು ಸಾರಿ ಸದನದಲ್ಲಿ ಭರವಸೆಯನ್ನು ಕೊಟ್ಟ ಮೇಲೆ ಶ್ರೀ ಅಶೋಕ್‌ರವರು ಹೊರಗಡೆ ಹೋಗಿ ಏನು ಹೇಳಿಕೆಯನ್ನು ಕೊಟ್ಟರು. ಅದಕ್ಕೆ ಏನು ದಾಖಲೆಗಳು ಇವೆ, ನಾವು ಇಲ್ಲಿ ಪತ್ರಿಕಾ ಹೇಳಿಕೆಗಳ ಮೇಲೆ ಚರ್ಚೆ ಮಾಡುತ್ತಾ ಇಲ್ಲ. ಇಲ್ಲಿ ನಾವು ಒಕ್ಕೊರಲಿನಿಂದ ಒತ್ತಾಯ ಮಾಡಿರುವಂಥಾದ್ದು ಸತ್ಯಾಸತ್ಯತೆಗಳು ಹೊರಗಡೆ ಬರಬೇಕು. ಇದನ್ನು ಸಿ.ಓ.ಡಿ.ಯವರಿಗೆ ರೆಫರ್ ಮಾಡಿ, ಯಾರು ಅಪರಾಧಿಗಳು ಇದ್ದಾರೆ. ಅವರಿಗೆ ಶಿಕ್ಷೆಯಾಗಲಿ, ಆ ಫಲಾನುಭವಿಗಳಿಗೆ ನ್ಯಾಯ ಸಿಗಲಿ, ಇದು ಮುಂದೆ ಪುನರಾವರ್ತನೆಯಾಗಬಾರದೆಂಬುದು ನಮ್ಮ ಸದುದ್ದೇಶವಾಗಿದೆ. ಆದರೆ, ನಿಮ್ಮಲ್ಲೇ ಭಿನ್ನಾಭಿಪ್ರಾಯವಿದೆ ಎಂದು ಹೇಳಿದಿರಿ. ಇದು ಒಂದು ಸಾರಿ ಈಗಾಗಲೇ ತೀರ್ಮಾನವಾಗಿರುವ ವಿಷಯ. ಒಂದು ಸಾರಿ, ನೀವು ಇದನ್ನು ಸಿ.ಓ.ಡಿ. ಗೆ ರೆಫರ್ ಮಾಡುತ್ತೇವೆ ಎಂದು ಹೇಳಿದ ಮೇಲೆ, ನೀವು ಅದರಿಂದ ವಾಪಸ್ಸು ಹೋಗಲು ಬರುವುದೇ ಇಲ್ಲ. ಹೋದರೆ, ಅದು ಪ್ರಿವಿಲೇಜ್ ಆಗುತ್ತದೆ ತಾವೇ ನೋಡಿದ್ದೀರಿ, ಈ ಅಧಿವೇಶನದಲ್ಲಿ ಯಾವುದಾದರೂ ವಿಷಯಕ್ಕೆ ಸಂಬಂಧಪಟ್ಟಂತೆ ಇಷ್ಟೊಂದು ಒಳ್ಳೆಯ ರೀತಿಯಲ್ಲಿ ಚರ್ಚೆಯಾಗಿ, ಜನರ ಹಿತದೃಷ್ಟಿಯಿಂದ, ಅವರ ಸಮಸ್ಯೆಗಳನ್ನು ಬಗೆಹರಿಸಿ, ಅವರಿಗೆ ಏನಾದರೊಂದು ನ್ಯಾಯ ಸಿಗಬೇಕು ಎನ್ನುವ ದೃಷ್ಟಿಯಿಂದ, ಒಕ್ಕೊರಲಿನಿಂದ ನಾವು ಕೆಲಸ ಮಾಡುತ್ತಿರಬೇಕಾದರೆ, ತಾವೇಕೆ ಅಪರಾಧಕ್ಕೆ ಗುರಿಯಾಗುತ್ತೀರಿ? ಹಿಂದೆ, ಇದರ ಬಗ್ಗೆ ಅಶೋಕ್ ರವರು ಪ್ರಸ್ತಾಪ ಮಾಡಿದಾಗ, ಚರ್ಚೆ ಸಂದರ್ಭದಲ್ಲಿ, ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡುತ್ತೇನೆ ಎಂದು ಹೇಳಿ ಆಗಿದೆ. ಹಾಗಾಗಿ, ಸಿ.ಓ.ಡಿ. ವರದಿ ಬರಲಿ. ಸಿ.ಓ.ಡಿ ವರದಿ ಬಂದರೆ ಸತ್ಯಾಸತ್ಯತೆಗಳು ಹೊರಗೆ ಬರುತ್ತವೆ. ಈಗ ತಾವು ವಾಪಸ್ಸು ಹೋಗುವುದಕ್ಕೆ ಬರುವುದಿಲ್ಲ, ಹೋಗಬಾರದು. ದಯಮಾಡಿ, ಯಾವುದೆ ಕಾರಣಕ್ಕೂ ಆ ರೀತಿ ಮಾಡಲು ಹೋಗಬಾರದು. ಅದು ಪದ್ಧತಿಯಲ್ಲ, ತಾವು ಹೊಸ ಸಂಪ್ರದಾಯ ಮಾಡಬೇಡಿ. ನಾವು ಪ್ರಿವಿಲೇಜ್ ಮೂವ್ ಮಾಡುವ ಸಂದರ್ಭಕ್ಕೂ ಅದು ಬರಬಾರದು. ಆದ್ದರಿಂದ ದಯಮಾಡಿ, ಅದನ್ನು ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಆರ್. ಅಶೋಕ್ (ತಮ್ಮ ಸ್ಥಾನದಿಂದ)** :ಅಶೋಕ್ ರವರು ಹೊರಗಡೆ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಆದರೆ ಇದಕ್ಕೆ ಮುಖ್ಯಮಂತ್ರಿಗಳು ಒಪ್ಪಿಯೇ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಇದರ ಪರವಾಗಿ ಮುಖ್ಯಮಂತ್ರಿಗಳ ಮನೆಯ ಮುಂದೆ ಹತ್ತು ಬಾರಿ ಪ್ರತಿಭಟನೆ ಮಾಡಿದೆ. ಆ ರೀತಿ ಪ್ರತಿಭಟನೆ ಮಾಡಿದಾಗ, ಸ್ವತಃ ಮುಖ್ಯಮಂತ್ರಿಗಳೇ ಹೇಳಿದ್ದಾರೆ, ಇದರಲ್ಲಿ ಅವ್ಯವಹಾರ ಕಂಡುಬಂದಿದೆ. ನಾನು

ಸಿ.ಓ.ಡಿ. ತನಿಖೆಗೆ ಕೊಡುತ್ತೇನೆ ಎಂದು ಹೇಳಿದ್ದಾರೆ, ಆವತ್ತಿನ ದಿನಾಂಕ, ಅದರ ಮೇಲೆ ಏನು ನೋಟ್ ಬರೆದಿದ್ದಾರೆ ಏನು ನೋಟ್ ಬರೆದಿದ್ದಾರೆ ಎಲ್ಲವನ್ನೂ ಬೇಕಾದರೆ ಕೊಡುತ್ತೇನೆ. ನನ್ನ ಹತ್ತಿರ ದಾಖಲೆ ಇದೆ.

ಸಿ.ಬಿ.ಪಿ. ಆವತ್ತು ತಾವು, ಇದನ್ನು ಸಿ.ಓ.ಡಿ. ತನಿಖೆಗೆ ಕೊಡುತ್ತೇನೆ ಎಂದು ಹೇಳಿದಿರಿ. ಸಿ.ಬಿ,ಐ.ಗೆ ಬೇಡ, ಅದು ನಿಮ್ಮ ವ್ಯಾಪ್ತಿಯಲ್ಲಿಲ್ಲ, ಸಿ.ಓ.ಡಿಗೆ ಕೊಡಿ ಎಂದು ನಾವು ಹೇಳಿದೆವು. ಆಯಿತು ಎಂದು ಹೇಳಿ, ಈಗ ಮತ್ತೆ ಏಕಾಏಕಿಯಾಗಿ, ಅದನ್ನು ಮರುಪರಿಶೀಲಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಈಗಾಗಲೇ ಇದರ ಬಗ್ಗೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಆಗಿದೆ. ಡಿ.ಜಿ.ಎಂ ನೇತೃತ್ವದಲ್ಲಿ ಡಿಪಾರ್ಟ್‌ಮೆಂಟಲ್ ತನಿಖೆಯಾಗಿ, ಅವ್ಯವಹಾರವಾಗಿದೆ ಎಂದು ಅವರು ವರದಿ ಕೊಟ್ಟಿದ್ದಾರೆ. ಈಗ ಮತ್ತೆ, ಅದೇ ಡಿಪಾರ್ಟ್‌ಮೆಂಟ್‌ನಿಂದ ತನಿಖೆ ಮಾಡುತ್ತೇವೆ ಎಂದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಇದರಲ್ಲಿ ಅವ್ಯವಹಾರವಾಗಿರುವುದು, ಒಂದೆರಡು ಕೋಟಿ ರೂಪಾಯಿಗಳಲ್ಲ, 13 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. 13 ಕೋಟಿ ರೂಪಾಯಿಗಳ ಅವ್ಯವಹಾರವಾಗಿರುವುದರಿಂದ ಇದನ್ನು ಸಿ.ಓ.ಡಿ.ಗೆ ಕೊಡಬೇಕು. ಯಾರು ನಿಜವಾದ ಫಲಾನುಭವಿಗಳಿಗೆ ಸೌಲಭ್ಯ ಸಿಗಬೇಕಾಗಿತ್ತೋ, ಅವರಿಗೆ ಸಿಗದೇ ಮೋಸವಾಗಿದೆ. ಅದಕ್ಕಾಗಿ, ಇಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾಗಿದೆ. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಯಾದರೆ ಇದು ಆಗುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು, ಅದರ ವರದಿ ಆಧಾರದ ಮೇಲೆ ಸರ್ಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಡಾ. ವೈ. ನಾಗಪ್ಪ** : ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಾಂಗದ ಫಲಾನುಭವಿಗಳಿಗೆ ಅನ್ಯಾಯವಾಗಿದೆ, ತೊಂದರೆಯಾಗಿದೆ ಎಂದು ಹೇಳಿದರು. ನಾನೂ ಅದರ ಬಗ್ಗೆ ಚಿಂತನೆ ಮಾಡಿದ್ದೇನೆ. ನಾವು ಸಿ.ಓ.ಡಿ. ತನಿಖೆ ಮಾಡಿಸಿದರೆ, ಅವರ ಎಲ್ಲಾ ಕಾರ್ಯಕ್ರಮಗಳು ಸ್ಥಗಿತವಾಗಬಹುದು, ಅವರು ಎಲ್ಲಾ ರೆಕಾರ್ಡ್ಸ್ ಸೀಜ್ ಮಾಡುತ್ತಾರೆ, ನಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಆಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ನಾನು ಇದನ್ನು ಪುನಃ ಪರಿಶೀಲನೆ ಮಾಡುತ್ತೇನೆ ಎಂದಷ್ಟೇ ಹೇಳಿದೆ. ಇಲ್ಲ ಎಂದು ನಾನು ನಿರಾಕರಣೆ ಮಾಡಿಲ್ಲ.

**ಶ್ರೀ ಬಿ.ಎಸ್.ಯಡಿಯೂರಪ್ಪ** : ಸಿ.ಓ.ಡಿ. ತನಿಖೆಯಿಂದ ಹಿಂದೆ ಹೋಗಲು ಬರುವುದಿಲ್ಲ. ಇದು ಜೀರೋ ಅವರ್‌ನಲ್ಲಿ ಬರುವುದಿಲ್ಲ. ತಾವು ಹಿಂದೆ ಏನು

ಭರವಸೆ ಕೊಟ್ಟಿದ್ದಿರಿ, ಅದನ್ನು ಮರುಪರಿಶೀಲನೆ ಮಾಡಲು ಬರುವುದಿಲ್ಲ. ಇದುವರೆಗಿನ ಇತಿಹಾಸದಲ್ಲಿ ಆ ರೀತಿ ನಡೆದಿಲ್ಲವೆಂದು ನಾನು ನಿಮಗೆ ಹೇಳುತ್ತಿದ್ದೇನೆ. ಒಂದು ಸಲ ಇಲ್ಲಿ ಪ್ರಸ್ತಾಪ ಮಾಡಿದ ಮೇಲೆ ಅದು ಮುಗಿದು ಹೋಯಿತು. ಈಗ ಮತ್ತೆ ನೀವು, ನಾನು ಇಲ್ಲವೆಂದು ಹೇಳಲಿಲ್ಲವೆಂದು ಹೇಳುತ್ತಾ ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗೆ ಮಾತನಾಡಿದರೆ ಹೇಗೆ? ಈ ಸಂಪ್ರದಾಯ ಒಳ್ಳೆಯದಲ್ಲ. ಹಿರಿಯ ಸಚಿವರುಗಳು ಇಲ್ಲಿದ್ದಾರೆ. ನೀವು ಈ ರೀತಿಯ ಹುಡುಗಾಟಿಕೆ ಮಾಡಿಕೊಂಡು ಸದನದ ಕಾರ್ಯಕಲಾಪಗಳನ್ನು ನಡೆಸುವುದೇ? ಇದರಿಂದ ಯಾರಿಗೆ ಗೌರವ ಬರುತ್ತದೆಂದು ಹೇಳಿ, ರಾಜ್ಯದಲ್ಲಿ ಏನು ಮೆಸೇಜ್ ಹೋಗುತ್ತದೆಂದು ಹೇಳಿ. ಇದುವರೆಗೂ ನಾವು ಸದನದಲ್ಲಿ ಅನೇಕ ವಿಷಯಗಳನ್ನು ಸಿ.ಓ.ಡಿಗೆ ವಹಿಸಿದ್ದೇವೆ.

**ಶ್ರೀ ಎಸ್. ರಾಜೇಂದ್ರನ್** : ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ, ಇದನ್ನು ಸಿ.ಓ.ಡಿ.ಗೆ ಕೊಟ್ಟರೆ, ಅವರು ಫೈಲ್‌ಗಳನ್ನು ಸೀಜ್ ಮಾಡಿ ಬ್ಲಾಕ್ ಮಾಡುತ್ತಾರೆ. ಅದರಿಂದ ಎಸ್.ಸಿ. ಎಸ್.ಟಿ. ಫಲಾನುಭವಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಅದು ತಪ್ಪು. ಅವರು ಸೀಜ್ ಮಾಡುವುದರಿಂದ ಎಸ್.ಸಿ. ಎಸ್.ಟಿ.ಯವರಿಗೆ ಬೆನಿಫಿಟ್ ಸಿಗುವುದಿಲ್ಲ ಎನ್ನುವುದಕ್ಕೋಸ್ಕರ ಸಿ.ಓ.ಡಿ. ತನಿಖೆಯೇ ಬೇಡವೇ? ತಾವೇ ಹೇಳಿ. ಯಾರು ತಪ್ಪು ಮಾಡಿದ್ದಾರೆ, ಅವರನ್ನು ಸಿ.ಓ.ಡಿ.ಗೆ ಕೊಡಲೇಬೇಕು. ಅದರ ಬಗ್ಗೆ ತಾವು ಈಗಾಗಲೇ ಭರವಸೆ ಕೊಟ್ಟಿದ್ದೀರಿ. ಅದರ ಜೊತೆಗೆ, ಸಿಆರ್ ಇ ಸೆಲ್ ಎನ್ನುವುದು ಒಂದಿದೆ. ಅವರ ಮುಖಾಂತರ ತಾವು ಇದನ್ನು ವೆರಿಫಿಕೇಷನ್ ಮಾಡಿರುವಿರೇ? ಅವರಿಗೆ ಒಂದು ತಿಂಗಳಿಗೆ 40 ಲಕ್ಷ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಅವರು ಇದನ್ನು ನೋಡಬೇಕಲ್ಲವೇ? ನೀವು ಸಿ.ಓ.ಡಿ. ಗೇ ಡೈರೆಕ್ಟಾಗಿ ಹೋಗುವುದಾದರೆ you abolish the C.R.E. don't waste the money of Rs. 40 lakh, ನೀವು ಅವರ ಮುಖಾಂತರ ಮಾಡಿಸಿ. ಅವರ ವರದಿ ಸ್ಯಾಟಿಸ್ಫಾಕ್ಟನ್ ಇಲ್ಲದಿದ್ದಾಗ ಮತ್ತೆ ನೀವು you give it to C.O.D. ನೀವು ಸಿ.ಓ.ಡಿ.ಗೆ ಕೊಡಬಾರದು ಎಂದು ಈ ಕಡೆ ಇರುವ ನಾವ್ಯಾರೂ ಹೇಳಲಿಲ್ಲ. ಸಿ.ಓ.ಡಿ.ಗೆ ಕೊಡಿ.ಸಿ.ಓ.ಡಿ ಕೊಟ್ಟರೆ ರೆಕಾರ್ಡ್ಸ್ ಸೀಜ್ ಆಗುವುದರಿಂದ ಎಸ್.ಸಿ: ಎಸಿ.ಟಿ.ಯವರಿಗೆ ಬೆನಿಫಿಟ್ ಸಿಗುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ.

ಅವರಿಗೆ ಬೆನಿಫಿಟ್ ಆಗಬೇಕು ಎನ್ನುವುದಕ್ಕೋಸ್ಕರ, ಇದನ್ನು ಸಿ.ಓ.ಡಿಗೆ ಕೊಡಬೇಡಿ, ಸಿ.ಓ.ಡಿಯನ್ನು ಮುಚ್ಚಿಬಿಡಿ ಎಂದು ನಾವು ಹೇಳುವುದಕ್ಕಾಗುತ್ತದೆಯೇ? ಅದು ತಪ್ಪು. ಯಾರು ತಪ್ಪು ಮಾಡಿದ್ದಾರೆ, ಅವರು

ಎಸ್. ಸಿ:ಎಸ್.ಟಿ ಕಾರ್ಪೋರೇಷನ್ನಿನ ಅಧಿಕಾರಿಯಾಗಿರಲೀ, ಜನರಲ್ ಮೇನೇಜರ್ ಆಗಿರಲೀ ಅಥವಾ ಐಎಎಸ್ ಆಫೀಸರ್ ಆಗಿರಲಿ ಅಥವಾ ಐಪಿಎಸ್ ಆಫೀಸರ್ ಆಗಿರಲಿ, the man who has utilised the scheduled castes' money ಎಸ್.ಸಿ:ಎಸ್.ಟಿಯವರ ಹಣವನ್ನು ಯಾರು ತಿಂದಿದ್ದಾರೆ, ಅವರಿಗೆ ಶಿಕ್ಷೆಯಾಗಲೇಬೇಕು. ಜೊತೆಗೆ, ಸಿಆರ್.ಇ ಸೆಲ್ ಎನ್ನುವುದೊಂದನ್ನು ತಾವು ಇಟ್ಟುಕೊಂಡಿದ್ದೀರಿ. ಆ ಸಿಆರ್ಇ ಸೆಲ್‌ಗೂ ನೀವು ನೋಟೀಸ್ ಕಳುಹಿಸಿ, ಅವರಿಂದಲೂ ರಿಪೋರ್ಟ್ ತೆಗೆಸುಕೊಳ್ಳೀ ಅವರ ರಿಪೋರ್ಟ್, if they are not satisfied with the report, then give it to C.O.D.

**ಡಾ. ವೈ. ನಾಗಪ್ಪ:** 2003ನೇ ಇಸವಿಯಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ನೀವು ಸಿ.ಓ.ಡಿ. ತನಿಖೆಗೆ ಒಪ್ಪಿಸಿ ಎಂದು ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ಆಯಿತು, ಎಲ್ಲ ಸದಸ್ಯರೂ ಒಕ್ಕೊರಲಿನಿಂದ ಹೇಳಿದ್ದೀರಿ, ನಾನು ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡಿಸುತ್ತೇನೆ.

(ಮಾನ್ಯ ಸಚಿವರ ಉತ್ತರಿಂದ ಸಮಾಧಾನಗೊಂಡ ಧರಣಿ ನಿರತ ಭಾರತೀಯ ಜನತಾ ಪಕ್ಷದ ಶಾಸಕರು, ಧರಣಿಯನ್ನು ಕೈ ಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)

**ಶ್ರೀ ಎಂ.ಪಿ. ಪ್ರಕಾಶ್** : ಸಿ.ಓ.ಡಿ. ಎನ್‌ಕ್ವೈರಿಯ ಸಂದರ್ಭದಲ್ಲಿ ಎಲ್ಲಾ ದಸ್ತಾವೇಜುಗಳನ್ನು ತೆಗೆದುಕೊಂಡು ಹೋದಾಗ, ಆ ತನಿಖೆಯ ನೆಪದ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಮಾಡುವಂಥ ಅನುಕೂಲಗಳಿಗೆ ತೊಂದರೆಯಾಗಿಬಿಡಬಹುದು ಎನ್ನುವ ಕಾರಣದಿಂದ, ಸದುದ್ದೇಶದಿಂದ ಅವರು ಯೋಚನೆ ಮಾಡಿದರು. ಮಾನ್ಯ ಸದಸ್ಯರುಗಳೆಲ್ಲಾ ಹೇಳಿದ ಮೇಲೆ, ಅವರ ಭಾವನೆಗೆ ಸಚಿವರು ಸ್ಪಂದಿಸಿದ್ದಾರೆ. ಆದ್ದರಿಂದ ಈ ಸಿ.ಓ.ಡಿ. ಎನ್‌ಕ್ವೈರಿಗೆ ಒಪ್ಪಿದ್ದಾರೆ.

**ಅಧ್ಯಕ್ಷರು** : ರಾಜೇಂದ್ರನ್‌ರವರೇ, ನೀವು ಶೂನ್ಯವೇಳೆಯಲ್ಲಿ ಪಾರದರ್ಶಕತೆ ಬಗ್ಗೆ ಪ್ರಸ್ತಾಪ ಮಾಡಲು ಪ್ರಸ್ತಾವನೆ ಕೊಟ್ಟಿದ್ದೀರಿ.

**ವಿಷಯ:** ಉಡುಪಿ ಜಿಲ್ಲೆಯ ಮಲ್ಪಯಲ್ಲಿ, ತಮಿಳುನಾಡು ಮೂಲದ ವ್ಯಾಪಾರಸ್ಥರು 10 ಕೋಟಿ ರೂಪಾಯಿಗಳ ಸೀಗಡಿ ಮೀನನ್ನು ಖರೀದಿಸಿ ಮೀನುಗಾರರಿಗೆ ಮೋಸ ಮಾಡಿರುವ ಬಗ್ಗೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):** ಮಾನ್ಯ ಅಧ್ಯಕ್ಷರೇ, ಉಡುಪಿ